ಅಪರಂಜಿ

ಮಾರ್ಚ್ 2002

ತಿಳಿನಗೆಯ ಕಾರಂ



ಬಿ. ನಾಗೇಂದ್ರ

ಪ್ರಕಾಶ್

ಶಿವಕುಮಾರ್

ಶ್ಯಾಮಲ ರವಿಶಂಕರ್

ಬಾಗೂರು ಚಂದ್ರು

ಗೌತಮ

ಅನಂತ ಕಲ್ಲೋಳ

ಎಸ್ಪಾರ್ಮೂರ್ತಿ

ಕುಮುದಾ ಪುರುಷೋತ್ತಮ್

ಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:

ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

Ph: 3345259
email: aparanji@hotmail.com
website: aparanjimag.com

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 19 ಮಾರ್ಚ್- 2002 ಸಂಚಿಕೆ -6

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27

ನಗುವಿನ PHILOSOPHY

- ಬಿ. ನಾಗೇಂದ್ರ

Religion and Philosophy - ಕನ್ನಡಿಸಿದರೆ "ಧರ್ಮ ಮತ್ತು ದರ್ಶನ". ಧರ್ಮ (ಅಥವಾ ಮತ) ಎಂದರೆ ಜೀವಿಸುವ ರೀತಿ ಹಾಗೂ ಕರ್ತವ್ಯವೂ ಹೌದು. ದರ್ಶನ ಎಂದರೆ ಸತ್ಯದ ಕಡೆಗೆ ಕೊಂಡೊಯ್ಯುವ ಹಾದಿ, ದಾರಿ - ಬೆಳಕು. ಈ ಅರ್ಥದಲ್ಲಿ ನಗು ಧರ್ಮವೂ ಹೌದು, ದರ್ಶನವೂ ಹೌದು - ಶ್ರೀ ಡಿ.ವಿ.ಜಿ. ಯವರನ್ನು ಕೇಳಿ.

ನಗುವು ಸಹಜ ಧರ್ಮ; ನಗಿಸುವುದು ಪರಧರ್ಮ
ನಕ್ಕು ನಗಿಸುವುದು ಅತಿಶಯದ ಧರ್ಮ
ನಕ್ಕು ನಗಿಸುವ, ನಗಿಸಿ ನಗುತ ಬಾಳುವ ವರವ
ಮಿಗೆ ಬೇಡಿಕೊಳೊ - ಮಂಕುತಿಮ್ಮ

- ಮಂಕುತಿಮ್ಮನ ಕಗ್ಗ (917)

ಸೃಷ್ಟಿಯಲ್ಲಿ ಮನುಷ್ಯನಿಗೆ ಮಾತ್ರ ನಗುವಿನ ಬಳುವಳಿ - ಇನ್ನಾವ ಪ್ರಾಣಿಗೂ ಇಲ್ಲ. ಹೀಗಿರುವಾಗ ನಗುವುದು ಸಹಜ, ಸ್ವಾಭಾವಿಕ, ದೈವದತ್ತ, ಮನುಷ್ಯನ ಪ್ರಕೃತಿಯಲ್ಲಿ ಅಂತರ್ಗತ. ತಾನು ನಗಬೇಕಾದದ್ದು ಧರ್ಮ, ಕರ್ತವ್ಯ, ಜೀವಿಸಬೇಕಾದ ರೀತಿ. ನಗಿಸುವುದು ಅಂದರೆ ಸಜೀವಿಗಳ ಮುಖದಲ್ಲಿ ನಗುವನ್ನು ಮೂಡಿಸುವುದು ಇನ್ನೂ ಹೆಚ್ಚಿನ ಧರ್ಮ, ಕರ್ತವ್ಯ, ಜೀವಿಸಬೇಕಾದ ರೀತಿ. ತಾನೂ ನಕ್ಕು ಇನ್ನೊಬ್ಬರನ್ನೂ ನಗಿಸುವುದು - ಇನ್ನೂ ಹಿರಿಯ ರೀತಿಯೇ ಸರಿ.

ಶ್ರೀ ರಾಜರತ್ನಂ ಹೇಳಿದಂತೆ: "ತನ್ನನ್ನು ಯಾರಾದರೂ ನೋಡಿ ನಕ್ಕರೆ, ನಕ್ಕು ನುಡಿದರೆ, ಅದರಿಂದ ನೊಂದುಕೊಳ್ಳದೆ, ಕೋಪಗೊಳ್ಳದೆ, ಅದರಿಂದ moody ಆಗದೆ, ಅದನ್ನೇ brood ಮಾಡದೆ, ಹೀಗೆ ಕೇಳಿ ಹಾಗೆ ನಕ್ಕು ಮರೆತುಬಿಡುವುದು ಪಕ್ವವಾದ sense of humour ಇರುವವನ ಲಕ್ಷಣ." ಈ ಲಕ್ಷಣವನ್ನು ಹೊಂದಿರುವವನು ನಕ್ಕು, ನಗಿಸಿ, ನಗಿಸಿ, ನಗುತ ಬಾಳುವುದಕ್ಕೆ ಯೋಗ್ಯನಾದವನು. ಈ ಯೋಗ್ಯತೆ ಒಂದು ವರವೇ ಸರಿ. ಆ ವರವನ್ನು ಅಧಿಕವಾಗಿ ಬೇಡೋಣ. ಇದನ್ನು ಕಂಡುಕೊಂಡಿದ್ದು ಬಾಳಿನಲ್ಲಿ ಒಂದು ದರ್ಶನ. ಹೇಗೆ ಅಂದರೆ:

ನಗುವಾತ ಪರಿಮಳವ ಪಸರಿಸುವ ಕುಸುಮ

- (ಮಂಕುತಿಮ್ಮನ ಕಗ್ಗ - 434)

ನಗು ಒಂದು ಹೂವಿನಂತೆ. ಹೂವು ತನ್ನಲ್ಲಿರುವ ಸುವಾಸನೆಯನ್ನು ಹರಡಿ ಎಲ್ಲರನ್ನೂ ಸಂತೋಷಪಡಿಸುತ್ತದೆ. ಆತ್ಮ ಪರಿಮಳ ಎಂದರೆ ಮನಸ್ಸಿನಲ್ಲಿರುವ ಸದ್ಭಾವನೆ. ಆತ್ಮ ಎನ್ನುವುದು ಹಿಂದೂ ವೇದಾಂತ ಸಾಹಿತ್ಯದಲ್ಲಿ ಒಂದು ಪಾರಿಭಾಷಿಕ ಶಬ್ದ - a technical word. ಸಂದರ್ಭಕ್ಕೆ ತಕ್ಕಂತೆ ದೇಹ, ಜೀವ, ಮನಸ್ಸು, ಬುದ್ಧಿ, ಅಂತಃಕರಣ, ಪರಮಾತ್ಮ - ಈ ರೀತಿ ನಾನಾ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಪ್ರಕೃತ ಚರ್ಚೆಯಲ್ಲಿ ಆತ್ಮ ಎಂದರೆ ಮನಸ್ಸು. ನಗುವಿನ ಮನಸ್ಸಿನ ಆನಂದವನ್ನು ಸುತ್ತಮುತ್ತಲಿನವರಿಗೆ ಹಂಚುವ ಸಾಮರ್ಥ್ಯವಿದೆ. ಆನಂದವನ್ನು ಹಂಚುವುದೇ ಆಧ್ಯಾತ್ಮಿಕತೆ - spirituality. ಹಾಗಾದರೆ ನಗು ಧರ್ಮ, ದರ್ಶನ ಅಷ್ಟೇ ಅಲ್ಲ, ಆಧ್ಯಾತ್ಮಿಕತೆಯೂ ಹೌದು.



"ಸ್ಟೆಬರ್ ಬಾರ್ ಅಂತ ಶುರುಮಾಡೋಣ, ಹತ್ತಿಮಿಷ ಆದ್ಮೇಲೆ ಕನೆಕ್ಷನ್ ತೆಗದ್ರೂ ಗೊತ್ತಾಗುಲ್ಲ"



● ಪ್ರಕಾಶ್

ಚಲನಚಿತ್ರ ರೀಲ್ ಬಾಕ್ಸ್‌ನಲ್ಲಿ ಮದ್ಯ ಸಾಗಣೆ; ಒಬ್ಬನ ಬಂಧನ

- ಸುದ್ದಿ

‘ಸಿನಿಮೀಯ’ ಸುದ್ದಿ ಎಂದರೆ ಇದೇ!!

★★★

ಸಚಿನ್ - ಸೌರವ್ ಅಪಹರಣಕ್ಕೂ ಜೈಷ್ ಉಗ್ರನ ಯೋಜನೆ

- ಪತ್ರಿಕೆ

ಇದರಿಂದ ಸೌರವ್ ಖುಷಿ ಪಟ್ಟರಂತೆ!!

★★★

ಪ್ರಚಾರದಲ್ಲಿ ಬಚ್ಚನ್ ನನ್ನ ಸಾಟಿಯಲ್ಲ

- ಲಾಲೂ

ಹೌದು, ಅವರಿಗೆ ವಿವೇಕ ಇನ್ನೂ ಇದೆ!!

★★★

ಪೋಲೀಸರ ಭವಿಷ್ಯನಿಧಿಯಲ್ಲಿ ಅಕ್ರಮ

- ಪತ್ರಿಕೆ

ಎದೆಗಾರಿಕೆ ಅಂದರೆ ಇದೇ ಇರಬೇಕು!!

★★★

ಚಿಕ್ಕಮಗಳೂರಿನಲ್ಲಿ ಚಿನ್ನದ ನಿಕ್ಷೇಪ ಪತ್ತೆ

- ಸುದ್ದಿ

ಹಿಂದೆ 'ಯಾರೋ' ಕಷ್ಟ ಕಾಲಕ್ಕೆ ಎಂದು ಇಟ್ಟಿರಬಹುದು!!

★★★

ದಿವಾಳಿತನದಿಂದ ರಕ್ಷಣೆ ಕೋರಿ ಅರ್ಜಿ ಸಲ್ಲಿಸಲು ಇಸ್ಕಾನ್ ನಿರ್ಧಾರ

- ಅಮೆರಿಕ ಸುದ್ದಿ

ಇದನ್ನು ಪರಿಹರಿಸಲು ಕೃಷ್ಣಪರಮಾತ್ಮನೇ ಸಂಭವಿಸಬೇಕು!!

★★★

ಬೆಂಗಳೂರಿನಲ್ಲಿ ಏರ್ ಕಂಡಿಷನರ್ ಮೇಳ ಆರಂಭ

- ಪತ್ರಿಕೆ

ಬೇಸಿಗೆಯಲ್ಲಾದರೂ ಮಾಡಬಾರದಾಗಿತ್ತೆ??

★★★

ಕನ್ನಡ ಎಂದರೆ ಥ್ರಿಲ್ ಆಗುವ ಜ್ಯೋತಿಕಾ

- ಸಿನಿಮಾ ಸುದ್ದಿ

ಆಹಾ!!

★★★

ದಾಸ್ಯ

ಒಡೆಯರಿಗೆ ಎಲ್ಲಿತ್ತು ಗೌರವ
ದಾಸರೆಂದರೆ ಅವರಿಗೆ ಭಯ!
ರಾಮಸೀತೆ ಸೌಮಿತ್ರಿಯರೂ
ನಿಂತೇ ಇದ್ದರು
ಕುಳಿತ ಹನುಮನ ಎದುರು!

- ಬಾಲು

ನಮ್ಮ ನಿಮ್ಮಲ್ಲಿ

ಇತ್ತೀಚೆಗೆ ಯೋಗಿಯಿಂದ ನನಗೊಂದು ಪತ್ರ ಬಂದಿತ್ತು, ಪತ್ರ ಎಂದರೆ ಅವರು ಬರೆದದ್ದಲ್ಲ, ಯಾರೋ ಅವರಿಗೆ ಬರೆದ ಪತ್ರವನ್ನ ಅವರು ನನಗೆ ಫಾರ್ವರ್ಡ್ ಮಾಡಿದ್ದು ಅಷ್ಟೇ. ಕುತೂಹಲ ಮೂಡಿಸುವಂತಿತ್ತು ಆ ಪತ್ರ. ಹಾಗಾಗಿ ಅದನ್ನು ಕನ್ನಡಿಸಿ ಕೊಟ್ಟಿದ್ದೇನೆ ಓದಿನೋಡಿ.

ಇಡೀ ಜಗತ್ತಿನ ಜನಸಂಖ್ಯೆಯನ್ನ ಒಂದು ನೂರು ಜನರ ಹಳ್ಳಿಯನ್ನಾಗಿ ಸಂಕುಚಿತಗೊಳಿಸಿದರೆ ಅಲ್ಲಿನ ಜನಸಂಖ್ಯೆಯ ವಿವಿಧ ಪ್ರಮಾಣಗಳು ಹೀಗೆ ಕಾಣುತ್ತದಂತೆ.

ಮೊದಲಿಗೆ ಅಲ್ಲಿ 21 ಯುರೋಪಿಯನ್ನರು, 8 ಆಫ್ರಿಕಾ ಖಂಡದವರು, 14 ಮಿಕ್ಕಲ್ಲ ಪಾಶ್ಚಿಮಾತ್ಯರು ಇವರುಗಳನ್ನು ಬಿಟ್ಟು ಮಿಕ್ಕ 57 ಜನ ಏಷಿಯಾದವರಾಗಿರುತ್ತಾರಂತೆ.

ಇವರುಗಳಲ್ಲಿ 52 ಮಹಿಳೆಯರಿದ್ದು 48 ಪುರುಷರಿರುವರಂತೆ. 30 ಜನ ಬಿಳಿಯರಿದ್ದು ಮಿಕ್ಕ 70 ಜನ ಇತರ ವರ್ಣದವರಿರುತ್ತಾರಂತೆ. ಹಾಗೆಯೇ 30 ಕ್ರಿಶ್ಚಿಯನ್ ಮತದವರಿದ್ದು ಮಿಕ್ಕ 70 ಇತರ ಮತಗಳ ಅನುಯಾಯಿಗಳಾಗಿರುವರಂತೆ.

ಕೇವಲ 6 ಜನ, ಶತಾಂಶ 59 ರಷ್ಟು ಜಗತ್ತಿನ ಐಶ್ವರ್ಯವನ್ನು ಅನುಭವಿಸುತ್ತಿರುತ್ತಾರಂತೆ. ಮತ್ತೆ ಆ ಆರು ಜನರೂ ಅಮೆರಿಕನ್ನರಾಗಿರುತ್ತಾರಂತೆ.

ಆ ನೂರು ಜನರ ಹಳ್ಳಿಯಲ್ಲಿ 80 ಜನ ತೀರ ಕೀಳುಮಟ್ಟದ ಮನೆಗಳಲ್ಲಿ ವಾಸಿಸುತ್ತಿರುತ್ತಾರಂತೆ.

70 ಜನ ಅನಕ್ಷರಸ್ಥರಿರುವರಂತೆ. ಆ ನೂರು ಜನರಲ್ಲಿ ಒಬ್ಬನಿಗೆ ಮಾತ್ರಾ ಕಾಲೇಜ್ ಶಿಕ್ಷಣ ಲಭ್ಯವಂತೆ. ಒಬ್ಬ ಮಾತ್ರಾ ಕಂಪ್ಯೂಟರ್ ಹೊಂದಿರುತ್ತಾನಂತೆ.

ಈ ದೃಷ್ಟಿಯಿಂದ ನೋಡಿದರೆ ನಮ್ಮ ದೃಷ್ಠಿಕೋನದಲ್ಲಿ ಏನೆಲ್ಲಾ ಬದಲಾಗಬೇಕೆಂಬ ಅಂಶ ತೀರ ಸ್ಪಷ್ಟವಾಗುತ್ತದಲ್ಲವೇ.

ನಿಮ್ಮ ಮನೆಯಲ್ಲಿ ಉಣ್ಣಲು ಉಡಲು ಕೊರತೆ ಇಲ್ಲದೇ, ತಲೆಮೇಲೊಂದು ಸೂರು ಇದ್ದರೆ ನೀವು ಜಗತ್ತಿನ ಶತಾಂಶ 75 ರಷ್ಟು ಜನಕ್ಕಿಂತ ಹೆಚ್ಚು ಭಾಗ್ಯವಂತರೆಂದು ಧಾರಾಳವಾಗಿ ಹೇಳಬಹುದು.

ನಿಮಗೊಂದು ಬ್ಯಾಂಕ್ ಅಕೌಂಟ್ ಇದ್ದು, ನಾಳೆಯ ಊಟಕ್ಕೆ ಚಿಂತೆ ಇಲ್ಲದಿದ್ದರೆ ನೀವು ಜಗತ್ತಿನ ಐಶ್ವರ್ಯವಂತರ ಸರಣಿಯಲ್ಲಿ ಮೇಲಿನ ಶತಾಂಶ 8ರಷ್ಟರ ಗುಂಪಿಗೆ ಸೇರುತ್ತೀರ.

ನೀವು ಹೆದರಿಕೆಯಿಲ್ಲದೇ, ನಿಮ್ಮ ದೇವಸ್ಥಾನಕ್ಕಾಗಲೀ, ಇಗರ್ಜಿಗಾಗಲೀ, ಮಸೀದಿಗಾಗಲೀ ಹೋಗುವುದು ಸಾಧ್ಯವಾಗಿದ್ದರೆ, ನೀವು ಜಗತ್ತಿನ ಮುನ್ನೂರು ಕೋಟಿ ಜನಗಳಿಗಿಂತ ಭಾಗ್ಯವಂತರು ಎಂದು ತಿಳಿಯಬಹುದು.

ನೀವು ನಿಮ್ಮ ಜೀವಿತದಲ್ಲಿ, ಯುದ್ಧವನ್ನಾಗಲೀ, ಸೆರೆಮನೆ ವಾಸವನ್ನಾಗಲೀ, ಚಿತ್ರಹಿಂಸೆಯನ್ನಾಗಲೀ, ಅನುಭವಿಸದೇ, ತೀವ್ರ ಹಸಿವು ನಿಮ್ಮನ್ನು ಹಿಂದೆಂದೂ ಕಾಡಿರದಿದ್ದರೆ, ನೀವು ಜಗತ್ತಿನ ಐವತ್ತು ಕೋಟಿ ಜನಗಳಿಗಿಂತ ಅದೃಷ್ಟಶಾಲಿಗಳು ಎಂದು ತಿಳಿಯಿರಿ.

ನಿಮ್ಮ ತಂದೆ ತಾಯಿ ಬದುಕಿದ್ದು ಇನ್ನೂ ಗಂಡಹೆಂಡಿರಾಗಿ ಬಾಳುತ್ತಿದ್ದರೆ, ನಿಜಕ್ಕೂ ನೀವು ಅದೃಷ್ಟಶಾಲಿಗಳು, ಏಕೆಂದರೆ ಆ ಆರು ಅಮೆರಿಕನ್ನರಿಗೂ ಸಹಾ ಇದು ಲಭ್ಯವಿಲ್ಲ.

ನೀವು ತಲೆಯೆತ್ತಿ, ನಗುನಗುತ್ತಾ ಜೀವನವನ್ನು ಇದಿರಿಸುತ್ತಿದ್ದರೆ, ಸಮಾಜಕ್ಕೆ ಋಣಿ ಎಂಬ ಭಾವ ನಿಮ್ಮ ಮನವನ್ನು ತುಂಬಿದ್ದರೆ ನೀವು ಅತ್ಯಂತ ಭಾಗ್ಯಶಾಲಿಗಳು, ಏಕೆಂದರೆ ಅನೇಕರಿಗೆ ಈ ಎಲ್ಲ ಸೌಲಭ್ಯಗಳಿದ್ದರೂ ಅವರು ಸಂತಸಪಡುವುದನ್ನು ಮರೆತಿರುತ್ತಾರೆ. ನೀವು ಈ ಪತ್ರವನ್ನು ಓದುತ್ತಿದ್ದರೆ ನಿಮ್ಮ ಅದೃಷ್ಟಕ್ಕೆ ಸಾಟಿಯೇ ಇಲ್ಲ. ಏಕೆಂದರೆ ಜಗತ್ತಿನ ಇನ್ನೂರು ಕೋಟಿ ಜನಕ್ಕೆ ಓದು ಬರದು. ಕೊನೆಯದಾಗಿ, ತಾನು ಎಲ್ಲರಿಗಿಂತ ಅದೃಷ್ಟಹೀನ ಅಂತ ನಿಮ್ಮ ಗೆಳೆಯ/ಗೆಳತಿ ಕೊರಗುತ್ತಿದ್ದರೆ ಅವರಿಗೆ ಈ ಪತ್ರ ತೋರಿಸಿ.

ತಾವು ಎಷ್ಟು ಭಾಗ್ಯವಂತರೆಂಬ ಅರಿವು ಅವರಿಗೆ ಮೂಡಲಿ.

ಯೋಗಿ ಕಳಿಸಿದ ಈ ಪತ್ರ ಓದಿದ ಕೂಡಲೇ ಇದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನ್ನಿಸಿತು.

– ಶಿವಕುಮಾರ್



"ಇಂಟರ್ನೆಟ್ ಮುಂದೇನೇ ಕೂರಿಸೂ ಅಂತ ಹಠ ಹಿಡ್ದಿದ್ಯಲ್ಲೇ, ಏನ್ಮಾಡ್ಲೀ?"

ರಂಗತ್ತೆ ಬಫೆ

– ಶ್ಯಾಮಲ ರವಿಶಂಕರ್

ರಂಗತ್ತೆ ನಮ್ಮ ನೆರೆಹೊರೆಯಲ್ಲಿ ಬಹಳ ಪ್ರಸಿದ್ಧಿ. ಆಕೆಗೆ ಅದೇನು ಪ್ರೀತಿ ಜನರನ್ನ ಕಂಡ್ರೆ! ನನಗೆ ಅವರೂ ಅಂದ್ರೆ ತುಂಬಾನೇ ಇಷ್ಟ. ಒಂಥರಾ ಮುಗ್ದೆ ಆಕೆ. ಬಾಯಿತುಂಬಾ ಮಾತಾಡ್ತಾ ಎಲ್ಲರನ್ನೂ ನಗಿಸ್ತಾ ತಾವೂ ನಕ್ಕು ಎಲ್ಲರಿಗೂ ಆದಷ್ಟು ಸಲಹೆ ಸಹಾಯಗಳನ್ನು ನೀಡುತ್ತಾ, ಮನೆಗೆ ಯಾರು, ಎಷ್ಟು ಹೊತ್ತಿನಲ್ಲಾದರೂ ಹೋಗಲಿ ಸಹೃದಯದ ಸತ್ಕಾರ ಸಲ್ಲಿಸುತ್ತಾ ಇರ್ತಾರೆ. ಒಟ್ಟಿನಲ್ಲಿ ಆಕೆ ಒಂದು happy soul! ಅವರನ್ನು ನೋಡಿದ್ರೆ ಎಂಥಾ ಗೋಳು ಮುಖದ ಸಿಂಗಳೀಕಕ್ಕೂ ಉಲ್ಲಾಸವೆಂಬ ಜಾಡು ಸಾಂಕ್ರಾಮಿಕ ಆಗೋದು sure!

ಒಬ್ಬೊಬ್ಬರಿಗೆ ಒಂದೊಂದು ತರಹದ weakness ಇರೋಲ್ವೆ? ಹಾಗೆ ನಮ್ಮ ರಂಗತ್ತೆಗೂ ಕೂಡ ಬಂದಿದೆ. ಅದೇನಪ್ಪಾ ಅಂದ್ರೆ, ಯಾರೋ ಏನೋ ಮಾಡಿದ್ರು, ಅದು ಚೆನ್ನಾಗಿತ್ತು ಅಂತ ಅನ್ನಿಸ್ಬಿಟ್ರೆ ಅದನ್ನ ಅವರು ಆದಷ್ಟು ಬೇಗ ಮಾಡಿಬಿಡಬೇಕು. ಇದು ಯಾವಾಗಲೋ ಒಮ್ಮೆ ಬರೋದ್ರಿಂದ ಅವರ ಮನೆಯವರಿಗೆ ಹೆಚ್ಚಿನ ತಲೆನೋವು ತಂದಿಲ್ಲ. ಇದು ಹೆಚ್ಚಾಗಿ ಸ್ಟೈಲುಗಳಿಗೇ ಮೀಸಲಾಗಿರುವುದರಿಂದ ತೊಂದರೆ, ಅದೂ ಬೇರೆಯವರಿಗೆ, ಇನ್ನೂ ಕಡಿಮೆ. ಉದಾಹರಣೆಗೆ, ಅವರ ಮಕ್ಕಳನ್ನು 'ಪಿಂಕಿ ಮತ್ತು 'ಬಿಂಟು' ಅಂತ ಕರೆಯೋದು!

ಇಂತಹ ರಂಗತ್ತೆಗೆ ಇದ್ದಕ್ಕಿದ್ದಂತೆ ತಾನೂ ಒಂದು ಬಫೆ host ಮಾಡಬೇಕು ಅಂತ ಚಪಲ ಹುಟ್ಟುಕೊಂಡಿತು. ಆಗಿಂದಾಗ್ಗೆ ನನ್ನ ಹತ್ತಿರ ಈ ತನ್ನ ಆಸೆಯನ್ನು ತೋಡಿಕೊಂಡಿದ್ದೂ ಉಂಟು. ಅದಕ್ಕೆ ನಾನು ಅವರನ್ನು ಹುರಿದುಂಬಿಸುತ್ತಾ, "ಆಗ್ಲೇಳಿ, ರಂಗತ್ತೆ, ನಮ್ಮ ಪಿಂಕಿ ಮದ್ವೇ ರಿಸೆಪ್ಶನ್‌ನಲ್ಲಿ ಬಫೆ ಇಟ್ಟರಾಯ್ತು" ಅಂದೆ. "ಅಯ್ಯೋ, ಅದು ಯಾವಾಗಾಗತ್ತೋ? ಇಷ್ಟಕ್ಕೂ ಅವಳು ಎಂ.ಬಿ.ಎ. ಮುಗ್ಸೋ ತನಕ ಮದುವೆ-ಗಿದುವೆ ಅಂತ ಶುರು ಮಾಡಿದ್ರ್ಯೋ, ನೋಡ್ತಿರು, ಅಂತ ಬೆದರಿಕೆ ಹಾಕಿದ್ದಾಳಲ್ಲೇ. ಅವಳ ಪ್ರಕಾರವೇ ಆಯ್ತು ಅಂದ್ರೆ ಇನ್ನೂ ಒಂದು ವರ್ಷ ಆದ್ರೂ ಕಾಯಬೇಕು"! ಅಂದ್ರು. ಅಷ್ಟೊಂದು ಅವಸರ ಆಕೆಗೆ! ಏನಾದ್ರೂ ಖಯಾಲಿ ಬಂದ್ಬಿಟ್ರೆ, ಅದರಪ್ಪನಾಣೆ, ಆಗಲೇ ಮಾಡಿ ಮುಗಿಸಬೇಕು ಅದು ಅವರ speciality!

ಇದಾದ ಸ್ವಲ್ಪ ದಿನಗಳಲ್ಲೇ ಹಾಗೂ ಹೀಗೂ ಪಿಂಕಿಯ ಮದುವೆನ ಗೊತ್ತು ಮಾಡೇಬಿಟ್ರು! ಪಿಂಕಿಯ ಹಠದಿಂದ ಮದುವೆ ಅವಳ ಎಂ.ಬಿ.ಎ. ಮುಗಿದ ಮೇಲೆ ಎಂದಾಯಿತು.

ಇಷ್ಟೆಲ್ಲಾ ಇತ್ಯರ್ಥ ಆಗೋ ಹೊತ್ತಿಗೆ ಬಫೆ waiting period come down by eight months! ಆ ಮುಂದಿನ ದಿನಗಳಲ್ಲಿ ಈ buffet ಹುಚ್ಚು ಆಗಾಗ ತಲೆ ಎತ್ತುತ್ತಿದ್ರೂ, ಪಾಪದ ರಂಗತ್ತೆಗೆ ಬೇರೆ ನೂರಾರು ಯೋಚನೆಗಳ ಕಡೆಗೆ ಗಮನವನ್ನು ಹರಿಸದೆ ವಿಧಿ ಇರಲಿಲ್ಲ. ಎಲ್ಲಾ ಸಕಾಲದಲ್ಲಿ ಸಿದ್ಧ ಮಾಡೇಬಿಟ್ಟರು! ಇವೆಲ್ಲ ಯಾಕೆ ಅಂದ್ರೆ, ಬಫೆಗೆ ಪ್ಲಾನುಗಳ ಮೇಲೆ ಪ್ಲಾನು ಹಾಕೋಷ್ಟು ಕಾಲ ಇಟ್ಕೊಳ್ಳೋಕೆ!

ಅಂತಹಾ ಸಮಯದಲ್ಲಿ ಒಂದು ದಿನ ನಮ್ಮನೆಗೆ ಬಂದ್ರು. 'ಉಶ್ಶಪ್ಪಾ' ಅಂತ ಸೋಫಾದ ಮೇಲೆ ಕುಸಿದ್ರು. ಒಂದು ಲೋಟ ತಣ್ಣೀರು ಕೊಟ್ಟೆ. ಕುಡಿದ ಮೇಲೆ ಆಕೆ ಪ್ರಾಣ ಸುಧಾರಿಸಿತು. ಆ ನಂತರ ಉತ್ಸಾಹದ ಚಿಲುಮೆ ಪುಟಿಯಿತು, ''ನೀನು ಮೆನು ನಿಶ್ಚಯಿಸುವುದರಲ್ಲಿ ಸಹಾಯ ಮಾಡ್ಬೇಕು ಕಣೇ. ನನ್ನ ಬಫೆದು. ಗೊತ್ತಾಯ್ತಲ್ಲ, my dream! ಅದನ್ನ realise ಮಾಡೋ ಟೈಂ ಬಂದಿದೆ. ನನ್ನ ಬಫೆ ಹೇಗಿರ್ಬೇಕು ಅಂದ್ರೆ, ಬಂದವರೆಲ್ಲ ವರ್ಷಾನುಗಟ್ಟಲೆ ಅದನ್ನ ನೆನೆಸ್ಕೋಬೇಕು. ಅಷ್ಟು ಸಖತ್ತಾಗಿರಬೇಕು!'' ಅಂದರು.

''ನಮ್ಮ ತಿನಿಸುಗಳಲ್ಲಿ ಏನು ಮಹಾ ಚಮತ್ಕಾರ ಮಾಡೋಕಾಗತ್ತೆ? ನೀವೇ ಹೇಳಿ, ರಂಗತ್ತೆ. ಏನೋ ಒಂದು ಹೊಟ್ಟೆ ತುಂಬ ಊಟ ಹಾಕುವ ಹಾಗೂ ಎಲ್ಲಾ ನೀಟಾಗಿರುವ ವ್ಯವಸ್ಥೆಗಳ ಕಡೆಗೆ ಗಮನ ಹರಿಸಿದ್ರೆ ಸಾಕು ಬಿಡಿ'' ಅಂತ ರಾಗ ಎಳೆದೆ.

ಮರೆತೆ, ಇದೆಲ್ಲ ಒಂದೂವರೆ ದಶಕಕ್ಕೂ ಹೆಚ್ಚಿನಷ್ಟು ಹಳೆಯ ಮಂಕು. ಈಗಿನ ಹಾಗೆ ಯಾವುದಾದರೊಂದು ಆಟದ ಮೈದಾನದಲ್ಲೋ, ಪೆರೇಡ್ ಗ್ರೌಂಡ್ಸ್‌ನಲ್ಲೋ ತಿಂಡಿ, ಊಟ, ಹಣ್ಣು, ಐಸ್‌ಕ್ರೀಮ್‌ಗಳ ಅಂಗಡಿಗಳನ್ನೇ ತೆರೆದಿಡುವ reception buffet ಕಂಡ ನವ ಯುವ ಪೀಳಿಗೆಗೆ ನಮ್ಮ ರಂಗತ್ತೆ ಬಫೆ may look too insignificiant, ಇರಲಿ.

''ನೀನು ಈಗ ವಿಷಯಕ್ಕೆ ಬಾ, ಮೆನು ನಿಶ್ಚಯಿಸಿಬಿಡೋಣ'' ಅಂದರು 'ಎಲ್ಲರ (ಅಂದರೆ ನಮ್ಮ ಕನ್ನಡಿಗರ) ಹಾಗೆ ಬಿಸಿಬೇಳೆ ಬಾತ್, ವಾಂಗೀಬಾತ್ ಒಂದೂ ಬೇಡ, ಬಿರಿಯಾನಿ ಮಾಡಿಸ್ತೀನಿ' ಅಂದು trumph card ಹಾಕಿದವನ ಹಾಗೆ ಬೀಗಿದರು.

'ಶಿವ, ಶಿವಾ, ಮಟನ್ ಬಿರಿಯಾನಿ ಕಡೆ ಯಾವತ್ತಿನಿಂದ ನಿಮ್ಮ ಚಪಲ?' ಅಂತ ಚುಡಾಯಿಸಿದೆ.

''ಸಾಕು, ಸುಮ್ನಿರೇ, ನಂಗೊತ್ತಿತ್ತು ನೀಹೀಗಂತೀಯಾ ಅಂತ. ವೆಜಿಟೆಬಲ್ ಬಿರಿಯಾನಿ, ಕಣೇ, ಜನ ಅಷ್ಟಿಷ್ಟು ಕಡೆ ಪಲಾವ್ ತಿಂದಿರ್ತಾರೆ, ವೆ.ಬಿ. ತಿಂದಿರೋದು ಕಡಿಮೆ'' ಅವರ ಸಮರ್ಥನೆ.

''ಅವರೆಡಕ್ಕೂ ಹೆಚ್ಚಿನ ವ್ಯತ್ಯಾಸ...'' ಅನ್ನೋ ನನ್ನ ರಾಗಾನ ಮೊಟಕುಗೊಳಿಸಿ, 'ನನಗೆ ಹೆಚ್ಚಿನ ಸಮಯವಿಲ್ಲ, ವೆ.ಬಿ. ಜೊತೆ ಇರತ್ತಲ್ಲ ಮೊಸರಿನ ಪಚ್ಚಡಿ - ಅದೇ ರಾಯತ. ಮೆಣಸಿನಕಾಯಿ ಬೋಂಡ (ಮಿರ್ಚಿ ಬಜ್ಜಿ) ಅದರ ಬದಲು ಎಲ್ಲೋ ತಿಂದಿದ್ದ ಜ್ಞಾಪಕ, ಹಸಿಮೆಣಸಿನ ಕಾಯನ್ನ ಎಣ್ಣೆಯಲ್ಲಿ ಬಾಡಿಸಿ, ಉಪ್ಪು ಉದುರಿಸಿರೋದು - ಏ ಸಖತ್ತಾಗಿ ಇರತ್ತೆ, ಗೊತ್ತಾ ಅದು ಇಡಿಸ್ತೀನಿ'' ಅಂದರು.

ನಾನು ಯಾವ ರೀತಿಯ contributions ಮಾಡೊ ಅವಶ್ಯಕತೆನೇ ಇರಲಿಲ್ಲ. ಯಾಕೇ ಅಂದರೆ ರಂಗತ್ತೇನೇ ಮನಸ್ಸಿನಲ್ಲಿ ಒಂದು list ಮಾಡಿಕೊಂಡೇ ಬಂದಿದ್ದಾರೆ. ಅವರಿಗೆ ತಕ್ಕ ಸಾಮರ್ಥ್ಯನೂ ಇದೆ. ಇನ್ನು ಅದನ್ನು ನನ್ನೊಂದಿಗೆ ಹಂಚಿಕೊಳ್ಳಲು ಬಂದಿದ್ದಾರೆ, ಅಷ್ಟೇ ಅನ್ನಿಸಿತು. ಮತ್ತೆ ಮುಂದುವರಿಯಿತು ಅವರ ಪಟ್ಟಿ - 'ಪೂರಿ, ಒಂದು ಮಸಾಲೆ ಪಲ್ಯ, ಒಂದು ಸಾದಾ ಪಲ್ಯ, ಮೊಸರುವಡೆ (ನಾನು ದಂಗಾದೆ. 'ಉದ್ದಿನ ವಡೆ ಪರ್ವಾಗಿಲ್ವಾ' ಅಂದೆ. 'ಶಾಸ್ತ್ರಕ್ಕೆ ಹಿಡಿ ಕಡಲೆಬೇಳೆ ಹಾಕಿದ್ರೆ ಆಯ್ತಲ್ಲೆ' ಅಂತ ನಕ್ಕರು) sweet ಮಾತ್ರ ನೋಡು, ಕುಬಾನಿಕಾ ಮೀಠಾ ಅಂತಾರೆ, ಕೇಳಿದ್ದೀಯಾ? ಹೆಚ್ಚಾಗಿ ಉತ್ತರ ಭಾರತದಲ್ಲಿ ಅದು prized item Apricots ದು ಕಣೇ. ಅದನ್ನೇ ಮಾಡಿಸ್ತೀನಿ. ದುಬಾರಿಯೇನೋ ಸರಿ, ಆದರೆ managable ಗೊತ್ತಾ? ವ್ಯಾನಿಲ್ಲಾ ಐಸ್‌ಕ್ರೀಂ ಮೇಲೆ ಆ್ಯಂಬರ್ ಕಲರ್ ಗೊಜ್ಜು ಹಾಗಿರತ್ತೆ. ಅದನ್ನ ಹಾಕ್ಕೊಂಡು ತಿಂದರೆ... ಆಹಾ... ಅದರ ಮಜವನ್ನೇನೆಂದು ವರ್ಣಿಸಲಿ ನಾನು?'' ಎಂದು ಎಲ್ಲೋ ಉತ್ತರ ಭಾರತದಲ್ಲಿ 'ಖೋಯಾ ಖೋಯಾ ಲಗ್ತಾ ಹೂಂ ಅನ್ನೋ ಹಾಗಾಗ್ಬಿಟ್ರು! ಈಗ ನನ್ನ ಬುದ್ಧಿಗೆ ಹೊಳೆಯಿತು. ರಂಗತ್ತೆ ಯಾರೋ North Indian ಮನೇಲಿ ಇದನ್ನ ಹೊಡೆದು ಬಂದಿದ್ದಾರೆ, ಅದಕ್ಕೆ ಸಂಪೂರ್ಣ ಶರಣಾಗತರಾಗಿದ್ದಾರೆ. ಅಲ್ಲದೆ ಅದರ ಪ್ರಚಾರ ಕಾರ್ಯ ಶಿರಸಾವಹಿಸ್ತಿದ್ದಾರೆ. ಅದಕ್ಕೆ ಈ ಬಫೆ ಅಂತ!

ಇಷ್ಟೆಲ್ಲಾ ಹೇಳಿದ ಮೇಲೆ ನನ್ನ ಬಾಯಲ್ಲಿ ನೀರೂರೋದು ಸಹಜ, ಅಲ್ವೇ? ಈಗ ನನಗೆ ಆ ದಿನ ಯಾವತ್ತು ಮೂಡುತ್ತದೋ ಅನ್ನುವಷ್ಟು ವರ್ಣಿಸಿ, ''ನಮ್ಮ ಪಿಂಕಿ ಮದ್ವೆ receptionಗೆ ಚೆನ್ನಾಗಿ dress ಮಾಡ್ಕೊಂಡು ಬಾರೇ, ತಾಯಿ. ನಾನೂ ನೋಡ್ತಿದ್ದೀನಿ, ನಿನ್ನನ್ನ, ಬೇರೆಲ್ಲಾ ಮದುವೆಗಳಲ್ಲಿ ಗೂಬೆ ಹಾಗೆ

ಹೋಗ್ತೀಯ. ಹಾಗೆಲ್ಲಾ ಬರ್ಬೇಡ smart ಆಗಿ ಬಾ'' ಅಂತ ವಿಶ್ವಾಸ ಆದೇಶವಿತ್ತರು.

ಅಂತೂ ಆದಿನ ಬಂದೇ ಬಿಟ್ಟಿತು. ಬೆಳಿಗ್ಗೆ ಮದುವೆ ಊಟ ಆದ್ಮೇಲೆ ಮನೆಗೆ ಹೋಗಿ ಸ್ವಲ್ಪ ರೆಸ್ಟ್ ತೆಗೆದುಕೊಂಡು ಸಾಯಂಕಾಲಕ್ಕೆ ಹೆಚ್ಚಿನ ಶ್ರದ್ಧೆ ವಹಿಸಿ ಒಳ್ಳೆಯ ಬಿಳಿಯ ಕಾಶ್ಮೀರಿ ಕಸೂತಿ ಸೀರೆ ಉಟ್ಟು, style ಆಗಿ ಹೋದೆ ನಾನು reception ಗೆ. ನನ್ನನ್ನು ನೋಡಿದೊಡನೆ ರಂಗತ್ತೆ, ''ಆಹಾ, ಹೀಗಿರ್ಬೇಡವಾ ನೀನು ಯಾವಾಗಲೂ? ಏನು ಚೆನ್ನಾಗಿ ಕಾಣಿಸ್ತಿದ್ದೀಯಾ ಗೊತ್ತಾ ಈಗ ನೀನೇ receptionist ಆಗಿರು. ಅದೇ ಚೆಂದ! ಅಂತ ನನ್ನನ್ನ ಪ್ರವೇಶ ದ್ವಾರದಲ್ಲೇ ನಿಲ್ಲಿಸಿದರು. ತಾವು Stage ಹತ್ತಿರ ನಿಂತು, ಮದುಮಕ್ಕಳನ್ನು ಅಭಿನಂದಿಸಿ ಆಶೀರ್ವದಿಸಿ ಕೆಳಗಿಳಿದು ಬಂದ ಆಹ್ವಾನಿತರನ್ನು ಅತ್ಯಾದರದಿಂದ ಊಟದ ಕಡೆಗೆ ಕಳಿಸುತ್ತಾ ನಿರಾತಂಕವಾಗಿ ಕೆಲಸದಲ್ಲಿ ತೊಡಗಿದ್ದ ರಂಗತ್ತೆಯನ್ನು ನೋಡಿದ ನನಗೆ ಇವರಿಗೆ receptionistನ ಅವಶ್ಯಕತೆಯಾದರೂ ಇದೆಯೇ ಎಂದನಿಸಿತು. That is her hand self! ಮಾಡ್ಬೇಕಾದ್ದನ್ನು ನಗ್ತಾ ನಗ್ತಾ efficient ಆಗಿ ಮಾಡೋದ್ರಲ್ಲಿ ಆಕೆ ಸುಪ್ರಸಿದ್ಧಿ!

ನನ್ನ ಹತ್ತಿರ ಸರಕ್ಕನೆ ಬಂದು, ''ಹೋಗೇ, ಬಫೆಗೆ. ಊಟದ ರುಚಿ ನೋಡಿ, ಏನಾದ್ರೂ ಲೋಪ ಇದ್ರೆ, ತಕ್ಷಣ ನಂಗೆ ತಿಳಿಸು'' ಎಂದು ಅಟ್ಟಿದರು ವಿಶ್ವಾಸದೊಡನೆ. ಅವರ ಮುಂಜಾಗ್ರತೆಯನ್ನು ಮೆಚ್ಚುತ್ತಾ ಬಫೆಯ expectation ನ್ನೂ ನನ್ನಲ್ಲಿ ತುಂಬಾ ಹೆಚ್ಚಿನ ಮಟ್ಟಕ್ಕೆ ಇದ್ದುದರಿಂದ ನಾನು ಆಕಡೆ ನಡೆದೆ.

ಊಟದ ಹಾಲ್‌ನಲ್ಲಿ ಒಂದು ಪಕ್ಕಕ್ಕೆ ಮೇಜಿನ ಊಟದ ವ್ಯವಸ್ಥೆ ಇತ್ತಾದರೂ ಬಫೆ ಕಡೆ ಜನವೋ ಜನ! ಒಬ್ಬರ ಮೇಲೊಬ್ಬರು ಬೀಳ್ತಾ ಏಳ್ತಾ ಇದ್ದಾರೆ! ಬಡ ಭಾರತದ ಜನ ಹಸಿವಿನಿಂದ ಪೀಡಿತರಾಗಿರುವದರ ಸಾದೃಶ ನನ್ನ ಮುಂದೆಯೇ ನಿಂತಿತ್ತು. ಜನ ಮಾತ್ರ grandly dressed in this best! 'ಬಡ' ಎಂದು ಕರೆಯಲಾಗದಷ್ಟು ಸಿರಿವಂತರೆಂದೇ ಅನ್ನಬಹುದಾದವರು! ನೋಡ್ತಾ ನೋಡ್ತಾ ಒಂದು ಪಕ್ಕದಲ್ಲಿ ನಿಂತ ನನ್ನನ್ನು ಒಮ್ಮೆಗೇ ಆವರಿಸಿದ ಜನ ಜಂಗುಳಿ ಅವರಲ್ಲಿ ಲೀನವಾಗಿಸಿಬಿಟ್ಟಿತು! ಒಳಕ್ಕೂ ಹೋಗಲಾರದೆ ಹೊರಕ್ಕೂ ಬರಲಾರದೆ ತೊಳಲಾಡುತ್ತಿದ್ದ ನನ್ನ ಕೈಗೆ ಯಾರೋ ಒಬ್ಬ ಪರಿಚಿತರು ಪಿಂಗಾಣಿ ಪ್ಲೇಟೊಂದನ್ನು ನೀಡಿದರು. ಪೇಪರ್ ಪ್ಲೇಟುಗಳಿರಲಿಲ್ಲ - ಪ್ಲಾಸ್ಟಿಕ್ ಪ್ಲೇಟುಗಳ ಕಾಲ ಕೂಡ ಅಲ್ಲ ಅದು. ಆದ್ದರಿಂದ ಪಿಂಗಾಣೀನೇ ಸ್ಟೈಲು. ಅದೇನಾದರೂ ಬಿದ್ದರೆ, ಫಜೀತಿ ಗೊತ್ತಿರೋದೇ ನಿಮಗೆಲ್ಲ! ಆದರೆ ಒಂದು ವಿಷಯ ನಾನು

ಅದನ್ನು ಹಿಡಿದುಕೊಳ್ಳದೇ ಇದ್ದಿದ್ದರೂ ಅದು ಕೆಳಗಡೆ ಬೀಳುತ್ತಾ ಇರಲಿಲ್ಲ! ಜಾಗವೆಲ್ಲಿತ್ತು ನೆಲದ ಮೇಲೆ? ಅದೂ ಅದು ಬೀಳುವಷ್ಟು? ಜನ ಸಮೂಹದಿಂದ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ತಳ್ಳಲ್ಪಟ್ಟ ನಾನು ಪೂರಿ ಇದ್ದ ಬೇಸಿನ್ ಮುಂದೆ ತಳ್ಳಲ್ಪಟ್ಟೆ, ಅದರಲ್ಲಿದ್ದ ಕಡೇ ಎರಡು ಪೂರಿಗಳನ್ನು ನನ್ನ ತಟ್ಟೆಗೆ ಹಾಕಿಕೊಳ್ಳುವ ಸೌಭಾಗ್ಯ ನನ್ನದಾಯಿತು! ಜನ ಸಮೂಹ ನನ್ನನ್ನು ಮುಂದೂಡುತ್ತಿದ್ದರೂ ಆದಷ್ಟು ಸಾವಧಾನವಾಗಿ ಜಾಗ ಮಾಡಿಕೊಂಡು ಪಲ್ಯದ ಕಡೆಗೆ ನುಸುಳಿದೆ. ಕಾಲು ಚಮಚ ಪಲ್ಯವನ್ನು ನನ್ನ ತಟ್ಟೆಗೆ ಹಾಕಿಕೊಳ್ಳೋಣ ಅಂತ ಅದನ್ನ ತಟ್ಟೆಗೆ ಮುಟ್ಟಿಸುವಾಗ ನೋಡ್ತೀನಿ, ನನ್ನೆರಡು ಪೂರಿಗಳೂ ಮಂಗಮಾಯ!! ಅರೆರೆ, ಹೀಗೂ ಇರ್ತಾರಾ ಜನ! ಇಷ್ಟೊಂದು ಹಸಿದಿದ್ದಾರಾ? ಒಬ್ಬರ ತಟ್ಟೆಯಿಂದ ಕದಿಯುವಷ್ಟು ಅವಶ್ಯತೆಯಾದರೂ ಇದೆಯೆ? ಈ elitist ಜನಕ್ಕೆ? ಇವನ್ನೆಲ್ಲಾ ಉತ್ತರಿಸುವವನು ಯಾರು? ಕಷ್ಟಪಟ್ಟು ದಕ್ಕಿಸಿಕೊಂಡಿದ್ದ ಪೂರಿ ಹೋದದ್ದಕ್ಕಿಂತ ಜನರ ಚಾತುರ್ಯದ ಮೇಲೆ ಬೇಸರವಾಯಿತು. ಪೂರಿ ಕಳ್ಳರು ಮುಂದೆ ಪಲ್ಯದ ಕಳ್ಳರೂ ಆದರೆ ಕನಿಷ್ಠ ಪಕ್ಷ ಅವರಿಗಾದರೂ ತಿನ್ನುವುದಕ್ಕೆ ಆಗುವುದು. ಇದೇ ತುಮುಲದಲ್ಲಿದ್ದ ನನಗೆ ನೂಕು ನುಗ್ಗಲು ವಿಪರೀತವಾಗಿ clastrophobia ದಿಂದ ಬವಳಿ ಬಂದು ನಾನು ತಡೆಯಲಾರದೆ ಹೊರಬಿದ್ದೆ.


ನಾನು ಹೊರಬಿದ್ದುದನ್ನು ಎಲ್ಲಿಂದಲೋ ಗಮನಿಸಿದ ಬಂಟೂ, ರಂಗತ್ತೆಯ ಮಗ, ಐಸ್‌ಕ್ರೀಂ ಆದ್ರೂ ತಿನ್ನು ಅಂತ ಒತ್ತಾಯಿಸಿದ್ದರಿಂದ ಆಕಡೆ ನಡೆದೆ. ಇಷ್ಟು ಹೊತ್ತಿಗೆ ನನ್ನ ಕಾಶ್ಮೀರಿ ಕಸೂತಿಯ ಬಿಳಿಯ ಸೀರೆಯ ಇಸ್ತ್ರಿ ಬಿಡಿ, ಸದ್ಯ ಸೀರೆ ನಾನೂ ಒಂದು piece that too intact ಆಗಿ ಇದ್ದೆವಲ್ಲ, ಅದೇ ಪುಣ್ಯ! ಆಗ ಹೊಳೆದಿದ್ದು ನಮ್ಮ ತಾತನವರ definition of buffetಯ ಸಾಕಾರ; 'style ಆಗಿ dress ಮಾಡಿಕೊಂಡು ಹೋಗಿ ಕೈಲಿ ತಟ್ಟೆ ಹಿಡ್ಕೊಂಡು ಪಾತ್ರೆ - ಪಾತ್ರೆನೂ ಬಗ್ಗಿನೋಡ್ತಾ ಬಸಿದುಕೊಳ್ತಾ ಇರೋ ಅನುಕೂಲಸ್ಥರಾದ ಭಿಕ್ಷುಕರ ಸಮ್ಮೇಳನ' ಅಂತ. ಅದು ಎಷ್ಟು ನಿಜ!

ಇನ್ನೂ ಊಟದ ಅಂತ್ಯವಾಗಿಲ್ಲದಿದ್ದರಿಂದ ಐಸ್‌ಕ್ರೀಂ ಕಡೆ ಜನ ಅಷ್ಟಿರಲಿಲ್ಲ. ಐಸ್‌ಕ್ರೀಂ ಮೇಲೆ ಕುಬಾನಿ-ಕಾ-ಮಿಠಾ (apricot sweet)ನ್ನು ಸುರುವಿಕೊಂಡು ತಿನ್ನೋಕೆ ಶುರು ಮಾಡಿದೆ. ಎರಡು ಸಲಿ ಬಾಯಿಗೆ ಇಟ್ಟಿರಲಿಲ್ಲ ಇನ್ನೂ, ಅಷ್ಟರಲ್ಲಿ ಜನ ಸಮೂಹ ಐಸ್‌ಕ್ರೀಂ ಇದ್ದೆಡೆಗೆ ಬಿಜಯಂಗೈಸಿತು. ಒಹೋ flood gates opened ಅಂತ ಅನ್ನಿಸಿತು. ಮತ್ತೆ ಉಸಿರು ಸಿಕ್ಕಿಹಾಕಿಕೊಳ್ಳುವ ಮೊದಲೇ ಜಾಗ ಖಾಲಿ ಮಾಡಿ ದೂರ ಹೋಗಿ ನಿಲ್ಲೋಣ ಎನ್ನುವುದರಲ್ಲಿ 'ತಪಕ್, ತಪಕ್' ಅಂತ ಏನೋ ಬಿದ್ದ ಸದ್ದು! ಏನೋ ಅಂತ ನೋಡಿದ್ರೆ, ಒಂದು ಮುದ್ದು ಪುಟಾಣಿ ತನ್ನ ತಾಯಿ ಕಂಕುಳಲ್ಲಿ

ವಿರಾಜಮಾನವಾಗಿದ್ದು, ಖುಷಿ ಹೆಚ್ಚಾಗಿ, ನನ್ನ ತಟ್ಟೆ ಅದರ ಕೈಗೆ ಸಿಲುಕಿದುದಾಗಿ, ನನ್ನ ಐಸ್‌ಕ್ರೀಂ + ಕು.ಕಾ.ಮೀ. combinationನ ತಟ್ಟೆ ಸಂತೋಷ ವ್ಯಕ್ತಪಡಿಸಿದ ಕಾರಣ, ನನ್ನ ಬಿಳೀ ಕಾಶ್ಮೀರ ಕಸೂತಿ ಸೀರೆ ಮೇಲೆಲ್ಲಾ ಕೆಂಪು ಮಿಶ್ರಿತ ಕಪ್ಪು ಬಣ್ಣದ ಕು.ಕಾ.ಮೀ.ದ ಅವಶೇಷ ವಕ್ರಿಸಿ ಕೂತಿತ್ತು. ವಾನಿಲ್ಲಾ ಐಸ್‌ಕ್ರೀಂ ಬಿದ್ದಿದ್ದುದೂ ಗೊತ್ತಾಗುವುದಿಲ್ಲವಲ್ಲಾ! ಆದರೆ, ಕು.ಕಾ.ಮಿ? ಪಾಪ, ಆ ಮಗುವಿನ ತಾಯಿ ಬಹಳವಾಗಿ ಪೇಚಾಡಿ ಕ್ಷಮೆಯಾಚಿಸಿದರು. ಇನ್ನು ನನಗೆ ಸಾಕಾಯಿತು. ಅಡಿಗೆ ಭಟ್ಟರಿಗಾಗಿ ತೆರೆದಿದ್ದ side exit ನಿಂದ ಹೊರಬಿದ್ದು ನಾನು ಕತ್ತಲಲ್ಲಿ ಆಟೋ ಹಿಡಿದು ಸೀದಾ ಮನೆ ಸೇರಿದೆ.

ನಾಲ್ಕಾರು ದಿನಗಳ ನಂತರ ಮದುವೆ ತಾಂಬೂಲ ಅಂತ ಸ್ಟೀಲ್ ತಟ್ಟೆಯಲ್ಲಿ ಪೊಳ್ಳಂಗಾಯಿ ಉಂಡೆ, ಚಕ್ಕುಲಿ ತೆಗೆದುಕೊಂಡು ಬಂದ ರಂಗತ್ತೆ, ''ಏನೇ ಹೀಗಾ ಮಾಡೋದು ನೀನು? receptionist, taster ಅಂತ ಏನೆಲ್ಲಾ portfolioಗಳನ್ನ ನಿನಗೆ ವಹಿಸಿದ್ರೂ ಏನು ಮಾಡದೆ ಕೈಕೊಟ್ಟೆ ನೀನು? ಊಟ ಆದಮೇಲೆ ಹೇಳದೆ - ಕೇಳದೆ ಗಾಡಿ ಬಿಟ್ಟೆಯಲ್ಲಾ'' ಅನ್ನಬೇಕಾ? ಯಾಕೋ ನನಗೆ ಆಗ ಸುಮ್ಮನಿರಲಾಗದೆ ಹೇಳಿಯೇಬಿಟ್ಟೆ ಎಲ್ಲಾ ಕೂಲಂಕುಷವಾಗಿ. ಒಂದು ನಿಮಿಷ ಗಂಭೀರವಾಗಿದ್ದು, ಯೋಚನಾ ಪರರಾದ ರಂಗತ್ತೆ, "Life is like that ಕಣೇ, take it easy" ಅಂತಂದು ತಾಂಬೂಲವಿತ್ತು ನನ್ನನ್ನು ಹರಸಿದರು.

ಯಾರ್‍ಯಾರು ಹೇಗ್ಹೇಗೆ ಜ್ಞಾಪಿಸ್ಕೊಳ್ತಾ ಇದ್ದಾರೋ ನಮ್ಮ ರಂಗತ್ತೆ ಬಫೆನ, ನನಗೆ ಮಾತ್ರ 19 ವರ್ಷವಾದರೂ (ಪಿಂಕಿಯ ಮಗ 'ಬಬ್ಲೂ' ಹತ್ತನೇ ತರಗತಿಯಲ್ಲಿ ಎಂಬತ್ತು ಪರ್ಸೆಂಟ್ ತೆಗೆದುಕೊಂಡಿದ್ದಾನೆ ಈ ವರ್ಷ) ಆ ಜ್ಞಾಪಕ ನನ್ನ ಸ್ಮೃತಿ ಪಟಲದ ಮೇಲೆ ಅಚ್ಚೊತ್ತಿ ನಿಂತಿದೆ!



''ನಾನು ಬರೆದ

ಈಮೇಲ್‌ನ ನಿನಗೆ

ಫಾರ್ವರ್ಡ್ ಮಾಡ್ಬಿಟ್ಲ

ಆ ಬಜಾರಿ!''

ಭಯೋತ್ಪಾದಕರು

– ಬಾಗೂರು ಚಂದ್ರು

ಪ್ರತಿದಿನ ಬೆಳಗಿನ ಪೇಪರ್ ತೆಗೆದಾಗಿನಿಂದ ರಾತ್ರಿ ಟೀವಿ ಆರಿಸುವವರೆಗೂ ಇದೇ ಆಗಿದೆ; ಮತ್ತೆ ಇಲ್ಲೂ ಇದೇನೆ? ಎಂದು ಮುಖ ಸಿಂಡರಿಸಿಕೊಳ್ಳಬೇಡಿ. ನಾನು ಅಲ್ ಖೈದಾ, ಜೈಶ್ ಇ ಮೊಹಮ್ಮದ್, ಲಷ್ಕರ್ ಇ ತೋಯ್ಬಾ, ಜಿಹಾದಿ ತಂಡ, ಹಮಾಸ್ ಅವರುಗಳ ರಾಕ್ಷಸೀ ಕೃತ್ಯಗಳ ಬಗೆಗೆ ಹೇಳಹೊರಟಿಲ್ಲ. ಸೆಪ್ಟೆಂಬರ್ 11, ಅಕ್ಟೋಬರ್ 1, ಡಿಸೆಂಬರ್ 13ರ ಘಟನೆಗಳನ್ನು ಜ್ಞಾಪಿಸುತ್ತಿಲ್ಲ. ಈ ಪಾಪಿ ಸಂಸ್ಥೆಗಳ ಭಯೋತ್ಪಾದನೆಯನ್ನು ಲಘುವಾಗಿ ತೆಗೆದುಕೊಳ್ಳುವುದು ಖಂಡಿತಾ ಸಾಧ್ಯವಿಲ್ಲ. ಇವುಗಳ ದುಷ್ಟ ನಾಯಕರ ವರ್ತನೆಯಲ್ಲಿ ನಗುವಂತಹುದು ಏನೂ ಇಲ್ಲ.

ಇಲ್ಲಿ ನನ್ನ ನಿನ್ನ ನಿತ್ಯ ಜೀವನದಲ್ಲಿ ಲಾಗಾಯಿತಿನಿಂದ ಬೇರೆಯವರಲ್ಲಿ ಭಯವನ್ನು ಉತ್ಪಾದಿಸಿ ಇನ್ನೊಬ್ಬರನ್ನು ಅಂಜಿಸಿ, ಅವರಲ್ಲಿ ಹೆದರಿಕೆ ಹುಟ್ಟಿಸಿ ಬೇಕಾದುದನ್ನು ಸಾಧಿಸಿಕೊಳ್ಳುವವರ ಬಗೆಗೆ ಹೇಳುತ್ತಿದ್ದೇನೆ. ನನ್ನ ಈ ಅರ್ಥದಲ್ಲಿ ನಾವು ನೀವು ಎಲ್ಲರೂ ಭಯೋತ್ಪಾದಕರೆ, ಜೊತೆ ಜೊತೆಗೆ ಭಯೋತ್ಪಾದನೆಯ ಬಲಿಪಶುಗಳೂ ನಾವೇ. ಬೇರೆಯವರನ್ನು ಹೆದರಿಸುತ್ತೀವಿ, ಬೇರೆಯವರಿಗೆ ಹೆದರುತ್ತೀವಿ. ನಂಬಿ ಕೆಟ್ಟವರಿಲ್ಲ ಎಂದು ದಾಸರು ಹೇಳಿದ್ದರು. ಅಂಜಿ ಕಂಗೆಡದವರಿಲ್ಲ, ಅಂಜಿಸಿ ಕಂಗೆಡಿಸದವರಿಲ್ಲ ಅಥವಾ ಭಯಪಟ್ಟು ನಡುಗದವರಿಲ್ಲ, ಭಯಪಡಿಸಿ ನಗದವರಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಹೀಗೆಂದದ್ದು ಕೇಳಿ ನಿಮ್ಮಲ್ಲಿ ಕೆಲವರು - ನಾನು ಭಯಪಡುವುದು; impossible ಎನ್ನಬಹುದು. ನಾನು ಸಿನಿಮಾಗಳಲ್ಲಿ ನನಗೆ ಹೆದರಿಕೆಯೆ? ಹೊ ಹೊ ಹೋ ಏನು ಮಾತು, ನನ್ನನ್ನು ಅಂಜಿಸೋರು ಇನ್ನೂ ಹುಟ್ಟಿಬರಬೇಕು ಎಂದು ಮೀಸೆ ತಿರುಗಿಸಿಕೊಂಡು ಇಡೀ ಥಿಯೇಟರೇ ಹಾರಿಹೋಗುವಂತೆ ಹೂಂಕಾರ ಮಾಡುವ ವೀರಾಧಿವೀರರನ್ನು ನೋಡಿದ್ದೇನೆ. ಯಕ್ಷಗಾನಗಳಲ್ಲಿ ಇದೇ ಅರ್ಥದ ಪದ್ಯಗಳನ್ನು ಹಾಡಿ ಅರ್ಧ ಗಂಟೆ ಚಪ್ಪರ ನಡುಗುವಂತೆ ನರ್ತಿಸುವ ಪಾತ್ರಗಳನ್ನು ನೋಡಿದ್ದೇನೆ. ನಿಜ ಜೀವನದಲ್ಲೂ ತಮ್ಮಲ್ಲಿನ ಭಯವನ್ನು ಗೆದ್ದು ಬೇರೆಯವರನ್ನು ರಕ್ಷಿಸುವ ವೀರ ವೀರಾಂಗನೆಯರು ಇರುತ್ತಾರೆ, ಅವರಿಗೆ ಬಹುಶಃ ಭಯ ಕಾಡುವುದಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಭಯದಲ್ಲಿ ನನ್ನ ಜೊತೆ ನಿಮ್ಮೆಲ್ಲರನ್ನೂ ಸೇರಿಸಿಕೊಂಡಿದ್ದು ತಪ್ಪು. ಅದರಲ್ಲೂ ಬಾಲ್ಯದಿಂದ ಅಂಜುಕುಳಿ, ಹೆದರುಪುಕ್ಲ, ಹೆಣ್ಣಾಪಿಸ್ಕೆ, ಉತ್ತರ

ಕುಮಾರ ಎನ್ನುವ ಹೆಸರು ಗಳಿಸಿದ ನನ್ನ ಜೊತೆಗೆ ಎಲ್ಲರನ್ನೂ ಸೇರಿಸಿಕೊಂಡಿದ್ದು ತೀರಾ ದೊಡ್ಡ ತಪ್ಪು. ಇದು ಬೇಕೂ ಆಗಿರಲಿಲ್ಲ; ನನ್ನನ್ನು ಹೆದರಿಸುತ್ತಿದ್ದವರ ಬಗೆಗೆ ಹೇಳಿದಾಗ ಎಲ್ಲಾ ತರಹದ ಭಯೋತ್ಪಾದಕರು ಹೇಗೂ ಬಂದೇ ಬರುತ್ತಿದ್ದರು.

ಸಾಕ್ಷಾತ್ ಶ್ರೀ ಕೃಷ್ಣನೇ ಬಾಲ್ಯದಲ್ಲಿ ಅಮ್ಮಾ ನೀನು ಗುಮ್ಮನ ಕರೆಯದಿರೆ ಎಂದು ಬೇಡಿಕೊಂಡಿದ್ದನ್ನು ದಾಸರು ವರ್ಣಿಸಿದ್ದಾರೆ; ಕೃಷ್ಣನ ಮೊದಲ ಭಯೋತ್ಪಾದಕಿ ಯಶೋದೆ ಎನ್ನುವುದನ್ನು ಅವರು ಮುಗುಂ ಆಗಿ ಸೂಚಿಸಿದ್ದಾರೆ. ಇಲ್ಲದ ಗುಮ್ಮನನ್ನು ಕರೆದು ಮಕ್ಕಳನ್ನು ಹೆದರಿಸುವ ಚಾಲಾಕುತನವನ್ನು ಯಶೋದೆಯಿಂದ ಎಲ್ಲಾ ಅಮ್ಮಂದಿರೂ ಕಲಿತಿದ್ದಾರೆ. ಇದೇ ರೀತಿ ನನ್ನಲ್ಲಿ ಮೊದಲು ಭಯ ಹುಟ್ಟಿಸಿದವಳೂ ನಮ್ಮಮ್ಮನೇ. ಆದರೆ ಅದಕ್ಕೆ ಮೊದಲೆ ನಾನು ಆತಂಕವಾದಿಯಾಗಿದ್ದೆನಂತೆ. ನಾನು ಹುಟ್ಟಿದ ದಿನದಿಂದಲೇ ವಿವಿಧ ರಾಗಗಳಲ್ಲಿ ಒಂದೇ ಸಮನೆ ಅತ್ತು ಇದಕ್ಕೇನಾಗಿದೆಯೋ ಹಸಿವೋ, ಹೊಟ್ಟೆ ನೋವೋ, ಇನ್ನೇನೋ ಎಂದು ಮನೆಯವರನ್ನು ಗಾಬರಿ ಪಡಿಸುವುದರಲ್ಲಿ ಪ್ರವೀಣತೆಯನ್ನು ಪಡೆದಿದ್ದೆನಂತೆ. ಹಾಗೆಂದು ನಮ್ಮಮ್ಮನೇ ಹೇಳುತ್ತಿದ್ದಳು. ಅಮ್ಮನ ತಂತ್ರ ಭಯೋತ್ಪಾದನೆ; ನನ್ನ ಮರುತಂತ್ರ ಆತಂಕವಾದ.

ಇದು ಖಂಡಿತಾ ನನ್ನ ಸ್ವಂತ ಸಾಧನೆಯಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ತಲೆಮಾರು ತಲೆಮಾರುಗಳ ಸತತ ಪ್ರಯತ್ನದಿಂದ ಮಕ್ಕಳು ಮೈಗೂಡಿಸಿಕೊಂಡಿದ್ದ ಆತಂಕವಾದದ ಪ್ರಯೋಜನ ನನಗೂ ಸಿಕ್ಕಿರಬೇಕು. ಅತ್ತು ಹೆದರಿಸುವ ತಂತ್ರವನ್ನು ನನಗೆ ಐದಾರು ವರ್ಷ ಆಗುವವರೆಗೂ ಮುಂದುವರಿಸಿಕೊಂಡು ಬಂದಿದ್ದೆನಂತೆ. ನಾನು ಕೊನೆ ಮಗು ಇದರಿಂದಾಗಿ ಹೆಚ್ಚು ವರ್ಷ ಅಮ್ಮನನ್ನು ಕಾಡುವ ವಿಶೇಷಾಧಿಕಾರ ನನಗೆ ಸಿಕ್ಕಿತ್ತು.

ಆ ಕೃಷ್ಣ ಪರಮಾತ್ಮ ಅಮ್ಮ ಸೃಷ್ಟಿಸಿದ ಗುಮ್ಮನ ಪ್ರಭಾವದಿಂದ ಬೇಗ ಮುಕ್ತಿ ಪಡೆದ. ಆದರೆ ನನಗೆ ಹಲವಾರು ವರ್ಷ ನಮ್ಮಮ್ಮ ಸೃಷ್ಟಿಸಿದ್ದ ಗುಮ್ಮ ಕಾಡುತ್ತಿದ್ದ ನೆನಪಿದೆ. ಗುಮ್ಮನು ಮಾಡಬಹುದಾದ ಹಾನಿಯ ಭಯಕ್ಕಿಂತ ಗುಮ್ಮನ ಬಗೆಗಿನ ಅಸ್ಪಷ್ಟತೆಯೆ ಹೆಚ್ಚು ಹೆದರಿಸುತ್ತಿತ್ತು; ಆ ಗುಮ್ಮ ಯಾವಾಗ ಬೇಕಾದರೂ ಎಲ್ಲಿಂದ ಬೇಕಾದರೂ ಬರಬಹುದು ಎನ್ನುವ ಭಯ ಹೆಚ್ಚಿನ ತಲ್ಲಣವನ್ನು ಹುಟ್ಟಿಸುತ್ತಿತ್ತು. ಇಂದಿನ ಭಯೋತ್ಪಾದಕರ ಶಕ್ತಿಯೂ ಇದೇ ಎಂದು ಓದಿದ್ದೇನೆ. ಅವರು ತಮಗೆ ಬೇಕಾದ ಸ್ಥಳ - ಸಮಯವನ್ನು ಆರಿಸಿಕೊಳ್ಳಬಹುದು. ಅವರ ವಿರುದ್ಧ ಹೋರಾಡುವವರು ಮಾತ್ರ ಸದಾ ಎಚ್ಚರವಾಗಿರಬೇಕು. ಪ್ರಜಾ ಪ್ರಭುತ್ವದ ರಕ್ಷಣೆಗೆ ಸತತ ಎಚ್ಚರಿಕೆ Eternal vigilance ಅಗತ್ಯ. ಹೇಳುವುದು ಎಷ್ಟು

ಸುಲಭ. ಆದರೆ ಪಾರ್ಲಿಮೆಂಟ್ ಭವನದ ಹನ್ನೆರಡು ದ್ವಾರಗಳನ್ನು ರೆಪ್ಪೆ ಮಿಟುಕಿಸದೆ ಕಾಯುವುದು ಎಷ್ಟು ಕಷ್ಟ.

ಹಲವಾರು ಅಮ್ಮಂದಿರು ಮಕ್ಕಳ ಅಳುವಿನ ವಿರೋಧಕ್ಕೆ, ಅವರುಗಳ ಮಂಡತನ, ಅವಿಧೇಯತೆಗೆ ತಾವೇ ಏಟಿನ ಅಥವಾ ಇತರ ಶಿಕ್ಷೆಯನ್ನು ಕೊಡುತ್ತಾರೆ; ಒಂದೊಂದು ಬಾರಿ ಅಪ್ಪಂದಿರಿಂದ ಕೊಡಿಸುತ್ತಾರೆ. ಕಾರಣವಿಲ್ಲದೆ ಮಕ್ಕಳ ಮೇಲೆ ಕ್ರೌರ್ಯ ತೋರಿಸುವ sadists ಗಳು ಆ ಕಾಲದಲ್ಲೂ ಇದ್ದರು, ಈಗಲೂ ಇದ್ದಾರೆ. ಇದು ಇಂದಿನ ಪರಿಭಾಷೆಯಲ್ಲಿ State Terrorism ಕಾಪಾಡಬೇಕಾದವರೆ ಕಾಡುವ - ಬೇಲಿಯೆ ಎದ್ದು ಹೊಲ ಮೇಯುವ ಪರಿ. ನಮ್ಮ ಮನೆಯಲ್ಲಿ ಯಾವ ಕಾಲದಲ್ಲೂ ಈ ತರಹದ ಭಯೋತ್ಪಾದನೆಯಿರಲಿಲ್ಲ. ಆದರೆ ನನ್ನ ತರಗತಿಯಲ್ಲಿ ಅಪ್ಪಂದಿರ ಮಲತಾಯಿಯರ ಶಿಕ್ಷೆಯ ಗುರುತುಗಳನ್ನು ಹೊತ್ತು ಬಂದವರನ್ನು ನೋಡಿದ್ದೇನೆ. ಅವರಲ್ಲಿ ಹೆಚ್ಚಿನವರು ಈ ದಬ್ಬಾಳಿಕೆಯನ್ನು ನಿರ್ವಾಹವಿಲ್ಲದೆ ಸಹಿಸಿಕೊಂಡು ಹೋಗುತ್ತಿದ್ದರು. ಕೆಲವರು ಮಾತ್ರ ದಂಡಿಸುವವರ ಮೇಲೆ ಅವರ ಮೇಲಿನವರಲ್ಲಿ ಅಂದರೆ ತಾತ ಅಜ್ಜಿಯರಲ್ಲಿ ದೂರು ಕೊಂಡೊಯ್ಯುತ್ತಿದ್ದರು. ಅದರಿಂದ ಇನ್ನಷ್ಟು ಕ್ರೌರ್ಯವನ್ನು ಅನುಭವಿಸುತ್ತಿದ್ದರು. ಇನ್ನು ಕೆಲವರು ತಾವೇ ತಮಗೆ ಸಾಧ್ಯವಿರುವ ರೀತಿಯಲ್ಲಿ ಪ್ರತೀಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು.

ಇದೇ State Terrorismನ ರಕ್ಷಿಸಬೇಕಾದವರು ಅಕಾರಣವಾಗಿ ಶಿಕ್ಷಿಸುವುದರ ಇನ್ನೊಂದು ವಿಕರಾಳ ರೂಪ ಶಾಲಾ ಮೇಸ್ಟರುಗಳ ಕ್ರೌರ್ಯ. ಶಿಕ್ಷೆಯಿಲ್ಲದೆ ಶಿಕ್ಷಣವಿಲ್ಲ ಎಂದು ಎಲ್ಲರೂ ಅದರಲ್ಲೂ ಮುಖ್ಯವಾಗಿ ಉಪಾಧ್ಯಾಯರುಗಳು ನಂಬಿದ್ದ ದಿನಗಳು; ಶಿಕ್ಷೆಗಳಲ್ಲೂ ಎಷ್ಟೊಂದು ವಿಧಾನಗಳು; ಅತಿ ಸರಳ stand up on the bench; ಬೆಂಚಿನ ಮೇಲೆ ನಿಲ್ಲುವ ಶಿಕ್ಷೆ. ''ನಾನು ಸ್ಕೂಲಿನಲ್ಲಿದ್ದಾಗ ಬೆಂಚಿನ ಮೇಲೆ ಕುಳಿತಿದ್ದಕ್ಕಿಂತ ನಿಂತಿದ್ದೆ ಹೆಚ್ಚು'' ಎಂದು ತಮ್ಮ ಶಾಲೆಯ ದಿನಗಳನ್ನು ಜ್ಞಾಪಿಸಿಕೊಂಡಿರುವ ಹಿರಿಯ ವೀಣಾ ವಿದ್ವಾಂಸರು ಬೆಂಚಿನ ಮೇಲೆ ನಿಲ್ಲುವುದರಲ್ಲಿ ಇರುವ ಅನುಕೂಲಗಳನ್ನು ಹೀಗೆ ವರ್ಣಿಸಿದ್ದಾರೆ: ಬೋರ್ಡು ಸ್ಪಷ್ಟವಾಗಿ ಕಾಣುತ್ತದೆ; ಮೇಷ್ಟರ ಭಂಗಿ, ಅಂಗಚೇಷ್ಟೆಗಳನ್ನು ಬೇರೆಯವರಿಗಿಂತ ಚೆನ್ನಾಗಿ ನೋಡಬಹುದು; ಅಷ್ಟೇಕೆ, ಇಡೀ ತರಗತಿಯ ಹುಡುಗ-ಹುಡುಗಿಯರ ಅದರಲ್ಲೂ ಮುಖ್ಯವಾಗಿ ಅವರ ಹರಳೆಣ್ಣೆ ಮೆತ್ತಿದ ನೆತ್ತಿಯ ಸಮಗ್ರಾವಲೋಕನ ಮಾಡಲು ಸಾಧ್ಯವಾಗುತ್ತದೆ; ಒಂದೊಂದು ಬಾರಿ ಆ ತಲೆಗಳ ಮೇಲೆ ಮದೋನ್ಮತ್ತವಾಗಿ ಸಂಚರಿಸುವ ಗೂಳಿ ಹೇನುಗಳ ಸಂಚಾರವನ್ನೂ ಗಮನಿಸಬಹುದು.

ವೀಣಾ ವಿದ್ವಾಂಸರು ವ್ಯಾಸಂಗ ಮಾಡಿದ್ದು ನಾಗರಿಕ ನಗರಿ ಮೈಸೂರಿನಲ್ಲಿ. ಆದರೆ ನಾನು ಓದಿದಂತಹ ಹಳ್ಳಿ ಶಾಲೆಗಳಲ್ಲಿ ಬೆಂಚೇ ಇರುತ್ತಿರಲಿಲ್ಲ. ಇತರ ತರಹದ ಶಿಕ್ಷೆ ಅನಿವಾರ್ಯವಾಗಿತ್ತು. ಅವುಗಳ ಕೆಲವು ಉದಾಹರಣೆಯೆಂದರೆ - ಮಂಡಿಗಳ ಕೆಳಗಿನಿಂದ ಕೈಗಳನ್ನು ತಂದು ಕಿವಿಗಳನ್ನು ಹಿಡಿದು ನಿಲ್ಲುವ ಖುರ್ಚಿ ಕೂರಿಸುವುದು, ಇಂತಹ ತಪ್ಪಿಗೆ ಇಷ್ಟು ಏಟು ಎನ್ನುವ ಲೆಖ್ಖದ ಬೆತ್ತದಿಂದ ಹೊಡೆತಗಳು, ಬೆರಳಿನ ಮೂಳೆಗಳ ಮೇಲೆ ಚೂಪಾದ ಸ್ಕೇಲಿನಿಂದ ಏಟುಗಳು, ಕಿವಿ ಅಥವಾ ಒಳತೊಡೆ ಹಿಂಡುವುದು, ಉಠ್‌ಬೈಸ್ ಮಾಡಿಸುವುದು, ಸರಿಯಾದ ಉತ್ತರ ಕೊಟ್ಟವನಿಂದ ಉತ್ತರ ತಿಳಿಯದವನಿಗೆ ಕಪಾಲ ಮೋಕ್ಷ ಮಾಡಿಸುವುದು, ಅದಕ್ಕೂ ಅಪಮಾನಕರವಾದ ಸರಿಯಾದ ಉತ್ತರ ಕೊಟ್ಟ ಹುಡುಗಿಯಿಂದ ಕಪಾಲ ಮೋಕ್ಷ ಮಾಡಿಸುವುದು ಇತ್ಯಾದಿ ಇತ್ಯಾದಿ. ಮಾಮೂಲಾಗಿ ಎಲ್ಲಾ ಹುಡುಗರನ್ನೂ ಎಲ್ಲಾ ಮೇಸ್ಟರುಗಳು, ಕಾರಣವಿರಲಿ ಇಲ್ಲದಿರಲಿ, ಹೊಡೆಯುತ್ತಿದ್ದರು. ಇದರ ಜೊತೆಗೆ ಕೆಲವು ತಂದೆ ತಾಯಿಯರೆ ಇವನ ಮುಖ ನೋಡಬೇಡಿ ಚೆನ್ನಾಗಿ ಹೊಡೆಯಿರಿ ಎಂದು ಉತ್ತೇಜನವನ್ನು ಕೊಡುತ್ತಿದ್ದರು. ಮೊದಲೇ ಕೋತಿ, ಮೇಲೆ ಹೆಂಡ ಬೇರೆ ಅನ್ನುವಂತಹ ಸ್ಥಿತಿ.

ಉಪಾಧ್ಯಾಯರುಗಳ ಕ್ರೌರ್ಯವನ್ನು ಅನುಭವಿಸುವುದು, ಜೊತೆಯವರು ಅನುಭವಿಸುವುದನ್ನು ನೋಡುವ ಸಂಕಟದ ನಡುವೆಯೂ ಒಂದೊಂದು ಆಹ್ಲಾದಕರ ಕ್ಷಣಗಳೂ ಇರುತ್ತಿದ್ದವು. ಕೆಲವು ದಿನ ಇದ್ದಕ್ಕಿದ್ದ ಹಾಗೆ - ಯಾವನೋ ನಮ್ಮ ಮಗೂನಾ ಹಿಗ್ಗಾಮುಗ್ಗಾ ಹೊಡೆದವನು ಎಂದು ಪೊರಕೆಯನ್ನು ಹಿಡಿದು ಮುದ್ದಿನ ಮೊಮ್ಮಗನ ಅಜ್ಜಿಯರು ಪ್ರತ್ಯಕ್ಷರಾಗುತ್ತಿದ್ದರು. ಶಾಲೆಯಲ್ಲಿಯೇ ಪೊರಕೆಯ ಪ್ರಯೋಗವಾಗಲು ಇತರ ಮೇಸ್ಟರುಗಳು ಅವಕಾಶ ಕೊಡುತ್ತಿರಲಿಲ್ಲ; ಆದರೆ ಈ ಅಜ್ಜಿಯರು ಮಾತ್ರ ತಮ್ಮ ಬೈಗುಳದ ಭಂಡಾರ ಮುಗಿಯುವವರೆಗೂ ಶಾಲೆ ಬಿಡುತ್ತಿರಲಿಲ್ಲ.

ನನಗಿಂತ ಹಿಂದಿನ ಕಾಲದಲ್ಲಿ ಪರಿಸ್ಥಿತಿ ಇನ್ನೂ ಕೆಟ್ಟದಾಗಿತ್ತಂತೆ. ಈಗಿನ ಕಾಲದಲ್ಲಿ ಪೋಲೀಸರು ಕೊಡುವ ಏರೋಪ್ಲೇನ್ ಶಿಕ್ಷೆಯಂತೆ ಕೋದಂಡಕ್ಕೆ ಹಾಕುವುದು ಕೂಲಿಮಠಗಳಲ್ಲಿನ ಶಿಕ್ಷಣದ ಮುಖ್ಯ ಭಾಗವಾಗಿತ್ತಂತೆ. ಇದು ನಿಜವಿರಲಾರದು; ಹಿಂದಿನವರ ಉತ್ಪ್ರೇಕ್ಷೆಯಿರಬೇಕು ಎಂದು ಕೋದಂಡ ಪದದ ಅರ್ಥವನ್ನು ಕಿಟ್ಟಲ್ ಶಬ್ದಕೋಶದಲ್ಲಿ ನೋಡಿದೆ. ಅಲ್ಲಿ ಕೋದಂಡ-ಬಾಲಕರ ಕೈಕಟ್ಟಿ ನೇತುಹಾಕಲು ಶಾಲೆಗಳಲ್ಲಿರುವ ಹಗ್ಗ ಎನ್ನುವ ಸ್ಪಷ್ಟ ವಿವರಣೆಯಿದೆ. ಕೆಲವು ಕೂಲಿ ಮಠಗಳಲ್ಲಿ ಕೋದಂಡದ ಕೆಳಗೆ ಮೆಣಸಿನ ಕಾಯಿ ಹೊಗೆ ಬೇರೆ ಹಾಕುತ್ತಿದ್ದರಂತೆ. ನನಗೊಂದು ಅನುಮಾನ - ಈಗಲೂ ಧಾರ್ಮಿಕ ಶಿಕ್ಷಣ

ಶಾಲೆಗಳಲ್ಲಿ ಇದೇ ತರಹದ ಶಿಕ್ಷೆ - ಶಿಕ್ಷಣ ಇರಬೇಕು; ಅದಕ್ಕೆ ಅಂತಹ ಶಿಕ್ಷಣವನ್ನು ಪಡೆದವರಿಗೆ ಬೇರೆಯವರ ಮೇಲೆ ಸೇಡು ತೀರಿಸಿಕೊಳ್ಳುವುದು, ಅಮಾಯಕರಿಗೆ ಚಿತ್ರಹಿಂಸೆ ಕೊಡುವುದು ಸುಲಭವಾಗಿ ಸಿದ್ಧಿಸುತ್ತದೆ.

ಅಪ್ಪಂದಿರ, ಶಿಕ್ಷಕರ state terrorism ಮಿತಿಮೀರಿದಾಗ ಏನಾಗಬಹುದು? ಮತ್ತೆ ಪುರಾಣದ ಕಡೆ ನೋಡಿದರೆ ಅಪ್ಪನ ಇಂತಹ ದೌರ್ಜನ್ಯದ ವಿರುದ್ಧ ಮೊದಲು ಬಂಡೆದ್ದವನು ಹಿರಣ್ಯ ಕಶಿಪುವಿನ ಮಗ ಪ್ರಹ್ಲಾದ. ದುಷ್ಟರನ್ನು ಶಿಕ್ಷಿಸಲು, ಶಿಷ್ಟರನ್ನು - ಹೇಳಿದ ಮಾತನ್ನು ಜೀ ಹುಜೂರ್ ಎಂದು ಕೇಳಿಕೊಂಡಿರುವ ಮಂದಿಯನ್ನು ಪಾಲಿಸಲು ಸದಾ ಸಿದ್ಧರಾಗಿ ಕುಳಿತಿರುವ ಶ್ರೀ ವಿಷ್ಣು ನರಸಿಂಹನ ರೂಪದಲ್ಲಿ ಪ್ರಹ್ಲಾದನ ಸಹಾಯಕ್ಕೆ ದರ್ಬಾರ್ ಹಾಲಿನ ಕಂಭ ಒಡೆದುಕೊಂಡು ಬರುತ್ತಾನೆ. ಈ ದೃಶ್ಯವನ್ನು ಊಹಿಸಿಕೊಂಡಾಗಲೆಲ್ಲಾ ನನಗೆ ಆ ಕಂಭ ಮುರಿದುಬಿದ್ದಾಗ ಮೇಲಿನ ತೊಲೆ ಅದರ ಮೇಲಿನ ರೂಫಿಂಗ್ ಏನೂ ಜಖಂ ಆಗಲಿಲ್ಲವೇ ಅನ್ನುವ ಅನುಮಾನ ಬರುತ್ತದೆ. ಒಂದು ಪಿಲ್ಲರ್ ಮುರಿದು ಹದಿನಾರು ಮಹಡಿಗಳ ಮನೆ ಕುಸಿದು ಬಿದ್ದ ಸುದ್ದಿಗಳು ಮುಂಬೈ ನಗರದಿಂದ ಪ್ರತಿ ಮಳೆಗಾಲದಲ್ಲೂ ಬರುತ್ತಿರುತ್ತವೆ. ಅದೇನಾದರೂ ಇರಲಿ ನರಸಿಂಹ ಪ್ರಹ್ಲಾದನ ಅಪ್ಪನನ್ನು ಸಾಯಿಸಿದ, ಅಂದರೆ ಆ ಬಾಲಕನನ್ನು - orphan ಅನಾಥನನ್ನಾಗಿ ಮಾಡಿ ಬಿಟ್ಟು ಹೋದ. ಹಿರಣ್ಯ ಕಶಿಪುವಿನ ಜೊತೆಗೆ ಅವನ ಆಪ್ತರು, ಬೆಂಗಾಲಿನವರೂ ಮಡಿದಿರಬೇಕು; ಆದರೆ ಸಾಮಾನ್ಯ ಪ್ರಜೆಗಳಿಗೆ ಈ super power intervention ಅತಿ ಬಲಶಾಲಿ ಶಕ್ತಿಯ ಮಧ್ಯ ಪ್ರವೇಶದಿಂದ - ಹೆಚ್ಚು ತೊಂದರೆಯಾದಂತಿಲ್ಲ.

ಆದರೆ ಈಗ ನೋಡಿ: ಅನೇಕ ಶಕ್ತಿಶಾಲಿ ದೇಶಗಳು ಶ್ರೀ ವಿಷ್ಣುವಿನಂತೆ ತಮ್ಮ ದೃಷ್ಟಿಯಲ್ಲಿ ದುಷ್ಟರು, ಪ್ರಜೆಗಳ ಮೇಲೆ ದುರಾಡಳಿತ ನಡೆಸುತ್ತಿರುವವರನ್ನು ಶಿಕ್ಷಿಸಲು ಕಾದು ಕುಳಿತಿರುತ್ತವೆ. ಅವಕಾಶ ಸಿಕ್ಕಾಗಲೆಲ್ಲಾ ಇಂತಹ ಮಹಾ ರಾಷ್ಟ್ರಗಳು ತಮಗೆ ಆಗದವರ ನಾಡುಗಳ ಮೇಲೆ ಬಾಂಬ್ ಮಳೆ ಕರೆದಿವೆ. ಆದರೆ ಪ್ರತಿಬಾರಿಯೂ ಇಂತಹ ಬಾಂಬು ಧಾಳಿಯಿಂದ ದುಷ್ಟ ನಾಯಕರುಗಳಿಗೆ ಚೂರೂ ಹಾನಿಯಾಗುವುದಿಲ್ಲ. ಆದರೆ ನಿರಪರಾಧಿ ಪ್ರಜೆಗಳು ಅಪಾರ ನಷ್ಟ ಅನುಭವಿಸುತ್ತಿದ್ದಾರೆ; ಇವರುಗಳ ಮನೆ, ಆಸ್ತಿಪಾಸ್ತಿ ನಾಶವಾಗುತ್ತದೆ; ಗಂಡ ಮಕ್ಕಳನ್ನು ಕಳೆದುಕೊಳ್ಳುತ್ತಾರೆ; ತಮ್ಮ ಊರುಗಳಲ್ಲಿಯೇ ತಮ್ಮ ದೇಶಗಳಲ್ಲಿಯೇ ಅನಾಥರಾಗುತ್ತಾರೆ; ಅಥವಾ ನಿರಾಶ್ರಿತರ ಹಣೆಪಟ್ಟಿ ಅಂಟಿಸಿಕೊಂಡು ಬೇರೆ ರಾಷ್ಟ್ರಗಳಿಗೆ ಗುಳೆ ಹೋಗುತ್ತಾರೆ.

ಬಾಲ್ಯದಲ್ಲಿ ಶಾಲೆಯಲ್ಲಿನ ಭಯದ ಜೊತೆಗೆ ದೇವರು ದಿಂಡರುಗಳ ಭಯವೂ ಆಗಾಗ ಕಾಡುತ್ತಿತ್ತು. ಕ್ಷೀರಸಾಗರದಲ್ಲಿ ಬೆಚ್ಚಗೆ ಮಲಗಿರುವ ವಿಷ್ಣು, ಕೈಲಾಸದಲ್ಲಿ ಹೆಂಡತಿ ಮಕ್ಕಳೊಂದಿಗೆ ಸರಸ ಸಲ್ಲಾಪ ಮಾಡುತ್ತಿರುವ ಶಿವ ಹೆದರಿಸುವ ದೈವಗಳಲ್ಲ; ಆಂಜನೇಯ ವೀರರಾಗಲು ಬಯಸುವವರಿಗೆ role model, ಗಣಪತಿ ಸರಸ್ವತಿ ಪರೀಕ್ಷೆಯಲ್ಲಿ ಓದದಿದ್ದವರಿಗೂ ಹೆಚ್ಚು ನಂಬರ್ ಕೊಡಿಸುವ ದಯಾಳುಗಳು. ಆದರೆ ಇದೇ ದೇವರುಗಳ ಇನ್ನೊಂದು ಮುಖವೂ ಇತ್ತು. ಶ್ರೀ ವಿಷ್ಣು ದಯಾಮೂರ್ತಿ ಆದರೆ ಸತ್ಯನಾರಾಯಣ ತನ್ನನ್ನು ಪೂಜಿಸದ ವ್ಯಾಪಾರಿಯ ಹಡಗುಗಳನ್ನು ಮುಳುಗಿಸುತ್ತಾನೆ; ಅವನ ಪ್ರಸಾದದ ಒಂದೇ ಒಂದು ತುಣುಕನ್ನು ಚೆಲ್ಲಿದವರಿಗೆ ತರಹ ತರಹದ ಕಷ್ಟವನ್ನು ಕೊಡುತ್ತಾನೆ. ಗಣಪತಿ ಪರೀಕ್ಷೆ ಪಾಸು ಮಾಡಿಸುತ್ತಾನೆ; ಆದರೆ ಅವನೇ ಚೌತಿ ಚಂದ್ರನನ್ನು ನೋಡಿದವರ ಮೇಲೆ ಎಲ್ಲಾ ತರಹದ ಅಪವಾದಗಳೂ ಬರುವಂತೆ ಮಾಡಬಲ್ಲ.

ಮನೆಯ ಹಿರಿಯರೆ ತಪ್ಪು ಮಾಡಿದವರಿಗೆ ಮಾಮಿ ಕಣ್ಣು ಕುಕ್ಕುತ್ತಾನೆ ಎಂದು ಚಿಕ್ಕಂದಿನಿಂದಲೇ ಹೆದರಿಸುತ್ತಿದ್ದರು. ಒಳ್ಳೆಯ ಜನ ಯಾವಾಗಲೂ God fearing. ದೇವರಿಗೆ ಹೆದರುವ ಇಂತಹ ಜನ ಮಾತ್ರ ದೇವಸ್ಥಾನದಲ್ಲಿ ಭಾರಿ ಚರಪು ಹಂಚಿಸುವಂತಹ ಪೂಜೆ ಮಾಡಿಸಬಲ್ಲರು. ತಮ್ಮ ಅಜ್ಞಾನ ಇಲ್ಲವೇ ಸ್ವಾರ್ಥಸಾಧನೆಗಾಗಿ ದಯಾಳು ದೇವರುಗಳನ್ನು ಸೇಡು ತೀರಿಸಿಕೊಳ್ಳುವ ಸಾಧಾರಣ ವ್ಯಕ್ತಿಗಳನ್ನಾಗಿ ಮಾಡಿ ದೇವರ ಹೆಸರಿನಲ್ಲಿ ಭಯವನ್ನು ಹುಟ್ಟಿಸುವ religious terrorists ಆಗಲೂ ಇದ್ದರು.


ಆಗ ಪುರಾಣಗಳ ದೇವರುಗಳಿಗಿಂತ ಸ್ಥಳೀಯ ದೇವತೆಗಳು ಆ ದೇವತೆಗಳ ಪೂಜಾರಿಗಳ ಭಯ ಹೆಚ್ಚು ಕಾಡುತ್ತಿತ್ತು. ಸಿಡುಬು, ಪ್ಲೇಗ್, ಕಾಲರಾಗಳಂತಹ ಭೀಕರ ಕಾಯಿಲೆಗಳನ್ನು ಕಳುಹಿಸುವ, ಅಥವಾ ಹಿಂದೆ ತೆಗೆದುಕೊಳ್ಳುವ ಶಕ್ತಿ ಈ ದೇವತೆಗಳಿಗಿತ್ತು. ವರ್ಷ ವರ್ಷ ಕಾಡುವ ಸೀತಾಳೆ ಸಿಡುಬು, ದಢಾರಗಳನ್ನೂ ಬೇರೆ ಬೇರೆ ದೇವತೆಗಳು ನಿಯಂತ್ರಿಸುತ್ತಿದ್ದವು. ಚರ್ಮರೋಗಗಳನ್ನು ಕೊಟ್ಟು ಕಾಡುವ ನಾಗದೇವತೆಗಳಿದ್ದವು. ಈ ದೇವತೆಗಳು ತಮ್ಮ ಖಾಸ ಭಕ್ತರ - ಪೂಜಾರಿಗಳ ಮೈಮೇಲೆ ಬಂದು ತಮಗೆ ಬೇಕಾದುದನ್ನು ಕೇಳುತ್ತಿದ್ದುದನ್ನು, ಪಡೆಯುತ್ತಿದ್ದುದನ್ನು ನೋಡುತ್ತಿದ್ದೆವು; ನೋಡಿ ನಡುಗುತ್ತಿದ್ದೆವು.

ಭಯೋತ್ಪಾದಕರನ್ನು ಭಯಂಕರವಾದಿಗಳು ಎಂದೂ ಕರೆಯುತ್ತಾರೆ. ಭಯಂಕರವಾದಿಗಳ ಬಗೆಗೆ ನಾನು ಚೂರು ಸಂಶೋಧನೆ ಮಾಡಿದ್ದೇನೆ. ಶ್ರೀ ಕೃಷ್ಣ ಪರಮಾತ್ಮ ಆಕಡೆ ಹನ್ನೊಂದು ಅಕ್ಷೋಹಿಣಿ, ಈಕಡೆ ಏಳು ಅಕ್ಷೋಹಿಣಿ ಸೈನ್ಯದ ನಡುವೆ ನಿಂತು ಅವರು ಇವರು ಎಂತಾ ಮುಖ ನೋಡಬೇಡ ಎದುರಿಗೆ

ಸಿಕ್ಕಿದವರನ್ನೆಲ್ಲಾ ಸಾಯಿಸು ಎಂದು ಅರ್ಜುನನಿಗೆ ಹೇಳಿದ. ಬರೀ ಹೇಳಲಿಲ್ಲ; ಅರ್ಜುನ ಉವಾಚಕ್ಕೆ ಕೆಲವೇ ಕೆಲವು ಪಂಕ್ತಿಗಳನ್ನು ಬಿಟ್ಟುಕೊಟ್ಟು ಭಗವಾನ್ ಉವಾಚ ಹದಿನೆಂಟು ಅಧ್ಯಾಯದ ತುಂಬಾ ಹರಡಿಕೊಳ್ಳುವಂತೆ ನೋಡಿಕೊಂಡ. ಅರ್ಜುನ ಶ್ರೀ ಕೃಷ್ಣನ ವಾದದಲ್ಲಿನ ತರ್ಕಕ್ಕೆ ಮಣಿಯಲಿಲ್ಲ, ಅವನ ಅಷ್ಟುದ್ದದ ಭಯಂಕರ ವಾದಕ್ಕೆ ಹೆದರಿ "ಸದ್ಯ ನಿಲ್ಲಿಸು ಮಹರಾಯ ನೀನು ಹೇಳಿದ ಹಾಗೇ ಕೇಳುತ್ತೇನೆ" ಎಂದ ಎನ್ನುವುದು ನನ್ನ ಅಭಿಪ್ರಾಯ. ಹೀಗೆ ಹೇಳಿದವರಲ್ಲಿ ನಾನು ಮೊದಲಿಗನಲ್ಲ, ನಿಜ. ಆದರೆ ಈ ಪೌರಾಣಿಕ ಘಟನೆ ಶ್ರೀ ಕೃಷ್ಣನೇ ಮೊದಲ ವಾದ ಭಯಂಕರ ಅಥವಾ ಭಯಂಕರವಾದಿ ಎನ್ನುವುದನ್ನು ದೃಢಪಡಿಸುತ್ತದೆ ಎನ್ನುವುದು ನನ್ನ ಸ್ವಂತ ಸಂಶೋಧನೆ.

ಶ್ರೀ ಕೃಷ್ಣನ ಅಗ್ದಿ ಭಯಂಕರವಾದದಿಂದ ದಾಯಾದಿಗಳ ನಡುವೆ ಪಿತ್ರಾರ್ಜಿತ ಆಸ್ತಿಗಾಗಿ ನಡೆದ ಮಹಾಭಾರತ ಯುದ್ಧ, ಧರ್ಮಯುದ್ಧ - ಕ್ರುಸೇಡ್, ಜಿಹಾದ್ ಆಯಿತು; ಯುದ್ಧದಲ್ಲಿ ಭಾಗವಹಿಸಿದ ಹದಿನೆಂಟು ಆಕ್ಷೋಹಿಣಿಯಲ್ಲಿ ಕನಿಷ್ಠ ಹದಿನೇಳಾದರೂ ಧ್ವಂಸವಾಯಿತಂತೆ. ಆದರೆ ಸದ್ಯ ಆ ಯುದ್ಧದಿಂದ ಹೆಚ್ಚಿನ collateral damages ಆಗಲಿಲ್ಲ; ಯುದ್ಧರಂಗದಿಂದ ದೂರವಿದ್ದವರಿಗೆ ಯಾವ ಹಾನಿಯೂ ಆಗಲಿಲ್ಲ.

ಇನ್ನೊಬ್ಬ ಭಯಂಕರವಾದಿ.... ನೀವೇ ಆಗುತ್ತಿದ್ದೀರಿ ಸಾಕು ನಿಮ್ಮ ವಿಚಿತ್ರವಾದ ಎಂದು ನೀವು ಗೊಣಗಿಕೊಳ್ಳುತ್ತಿರುವಂತಿದೆ, ಇಲ್ಲಿಗೇ ನಿಲ್ಲಿಸುತ್ತಿದ್ದೇನೆ.



ಆಜ್ಞಾಪಾಲನೆ

– ಗೌತಮ

ಮಂಡೆಗೆ ಹೊಳೆದದ್ದನ್ನ, ಹಿಂದು-ಮುಂದು ನೋಡದೆ, ಸಂಡೆ-ಮಂಡೆಗೆ ಕಾಯದೆ, ಮಂಡಿಸಿಬಿಡುವುದರಲ್ಲಿ ನಮ್ಮನ್ನು ಆಳುವವರು ತುಂಬ ಪರಿಣತರು. ಅವರು ಮಿನಿಸ್ಟರುಗಳೇ ಆಗಬೇಕೆಂದೇನಿಲ್ಲ. ಕೈಯಲ್ಲಿ ಅಧಿಕಾರ ಇರುವ (ಅಂದರೆ ನಾವೇ ನಮ್ಮ ಕೈಯಾರೆ ಪವಿತ್ರವಾದ ಮತವನ್ನು ನೀಡುವುದರ ಮೂಲಕ ಅವರಿಗೆ ಕೊಟ್ಟಿರುವ) ಯಾರು ಬೇಕಾದರೂ ಆಗಬಹುದು.

'ಫೆಬ್ರವರಿ ಮೂವತ್ತರಿಂದ ಹೆಲ್ಮೆಟ್ ಹಾಕಬೇಕಾಗಿಲ್ಲ' ಅಂತ ಒಬ್ಬ ಧಣಿಗಳು ಹೇಳಿದರೆ, ಇನ್ನೊಬ್ಬ ದೊರೆಗಳು 'ನಾಳೆಯಿಂದ ಹೆಲ್ಮೆಟ್ ಕಡ್ಡಾಯ' ಅಂತ ಆಜ್ಞೆ ಹೊರಡಿಸುತ್ತಾರೆ. 'ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಬಾರದು' ಅಂತ ಇನ್ನೊಬ್ಬ ಸಾಹೇಬರು ಅಪ್ಪಣೆ ಕೊಡಿಸಿದರೆ, ಮಗದೊಬ್ಬ ಸಚಿವರು 'ಫುಟ್‌ಪಾತ್ ಮೇಲೆ ಸೈಕಲ್ ತುಳಿದರೆ ಘೋರವಾದ ಶಿಕ್ಷೆಗೆ ಗುರಿಪಡಿಸಲಾಗುತ್ತದೆ' ಅಂತ ಸಾರ್ವಜನಿಕ ಸೈಕಲ್ ಸವಾರರಲ್ಲಿ ನಡುಕು ಹುಟ್ಟಿಸುತ್ತಾರೆ. ಮೊಮ್ಮಗದೊಬ್ಬರು - ಇನ್ನೂ ಮೀಸೆ ಬಾರದವರು - 'ಗಿರಿಜಾ ಮೀಸೆ ಬಿಟ್ಟರೆ ಜೈಲು ಶಿಕ್ಷೆ' ಅಂತ ಹೆದರಿಸುತ್ತಾರೆ.

ಹೀಗೇ, ಹೀಗೇ, ನಿಮ ನಿಮಗೆ ತೋಚಿದ ಲಕ್ಷಾಂತರ ಆಜ್ಞೆಗಳನ್ನು ಪಟ್ಟಿ ಮಾಡ್ತಾ ಕೂರಬಹುದು - ನಿಮಗೇನೂ ಕೆಲಸವಿಲ್ಲದಿದ್ದರೆ ಇಂಥವುಗಳಲ್ಲಿ ಅದೆಷ್ಟೋ ಆಜ್ಞೆಗಳು ಆಜ್ಞೆಗಳಾಗಿ ಹೊರಟ ಕೆಲವೇ ಕ್ಷಣಗಳಲ್ಲಿ ಥೇ, ಅಷ್ಟೊಂದು ಮೋಸ ಮಾಡೋದು ಬೇಡ, ಕೆಲವೇ ದಿನಗಳಲ್ಲಿ ಅನಜ್ಞೆಗೆ ಒಳಗಾಗಿ ಮತ್ತಿನ್ನೊಬ್ಬರು ಅಧಿಕಾರಕ್ಕೆ ಬರುವವರೆಗೂ 'ಅಂಥ ಒಂದು ಆಜ್ಞೇನ ಯಾರೋ ಹೊರಡಿಸಿದ್ದರು' ಅಂಬೋದೇ ಮರೆತುಹೋಗಿರುತ್ತೆ.

ಇಂಥದ್ದೇ ಆಜ್ಞೆಯೊಂದು ಅದೆಷ್ಟನೆಯ ಸಾರ್ತಿಯೋ, ಹೊರಬಿತ್ತು; ಆಟೋರಿಕ್ಷಾದಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚಿನವರನ್ನು ಕರೆದೊಯ್ಯಬಾರದು. ಈ ನಿಯಮ ಮೀರಿದರೆ, ಅಂದರೆ, ನಿಗದಿತ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಕರೆದೊಯ್ದರೆ ಕಠಿಣ ಶಿಕ್ಷೆ ಅಂತ ವಾಲಿಯಾಜ್ಞೆ ಬಂತು. 'ಹೆಂಗಸರಿಗೆ ಮೀಸಲಿಟ್ಟ ಸ್ಥಳಗಳಲ್ಲಿ ಗಂಡಸರು ಕೂರಬಾರದು' ಎಂಬೊಂದಾಜ್ಞೆ ಹೀಗೆ ಹಿಂದೆಂದೆಂದೋ ಒಮ್ಮೆ ಆದದ್ದು ನೆನಪಿಗೆ ಬಂತು. ಹಾಗೆ ಕುಳಿತುಕೊಂಡವರ ಮೇಲೆ ಕ್ರಮವನ್ನು ತೆಗೆದುಕೊಂಡರು - ಹೊಸದರಲ್ಲಿ ಅಗಸ ಗೋಣೀನ ಎತ್ತೆತ್ತಿ, ಒಗೆದ ಅನ್ನೋಥರ. ಆ ಕಾಲದಲ್ಲಿ ಪ್ರತಿನಿತ್ಯ ಅದೊಂದು

ಸುದ್ದಿ, ಹಾಗೆ ಕೂತ ಗಂಡಸರಿಗೆ ಶಿಕ್ಷೆ-ಜುಲ್ಮಾನೆ. ಅದರಿಂದ ಸಾರಿಗೆ ಸಂಸ್ಥೆಗೆ ಒಂದಷ್ಟು ಆದಾಯವೂ ಬಂತೂಂತನ್ನಿ. ಆದರೆ ಇಂದು? ಮೊದಲು ಯಾರು ಕೂತರೆ ಕೊನೆವರೆಗೂ ಅವರದ್ದೇ ಸೀಟು.

ರಿಕ್ಷಾ ಕೇಸಿಗೆ ಬರೋಣ, ಹೊಸದಲ್ಲವೇ? ಅಗಸರು ರೆಡಿಯಾದರು, ಹಿಡಿಯೋಕೆ, ಹಿಡಿದು ಕೇಸು ಹಾಕೋಕೆ. ನಾನೂನೂ ನೋಡ್ತಾನೇ ಇದ್ದೆ. ಸ್ಕೂಲು ಇನ್ನೊಂದು ನೂರು ಗಜ ದೂರದಲ್ಲಿದೆ ಅನ್ನೋ ಜಾಗದಲ್ಲಿ ದೊಡ್ಡ ಮರದ ಹಿಂದೆ ಪೋಲೀಸನೊಬ್ಬ ಅವಿತು ನಿಂತಿದ್ದನ್ನು ಕಂಡೆ. ದೂರದಲ್ಲೊಂದು ರಿಕ್ಷಾ ಬರುತ್ತಿತ್ತು. ಅದರ ಎರಡೂ ಬದಿಗಳಲ್ಲಿ ಚಾಚಿಕೊಂಡಿದ್ದ ಬ್ಯಾಗುಗಳ ಬೆಟ್ಟವನ್ನು ನೋಡಿದ (ಪೋಲೀಸು). ಅವನು ನೋಡಿದ್ದನ್ನ ನಾನೂ ನೋಡಿದೆ. ಅವನು ಅವಿತುಕೊಂಡಿದ್ದ ಮರದ ಮುಂದೆ ರಿಕ್ಷಾ ಹಾದು ಹೋಗಬೇಕೆನ್ನುವಷ್ಟರಲ್ಲಿ ಸರಕ್ಕನೆ ರಸ್ತೆಗೆ ಬಂದು ರಿಕ್ಷಾಗೆ ಕೈ ಅಡ್ಡ ಹಿಡಿದ. ಆಟೋ ನಿಂತಿತು. ಎಣಿಸಿದ. ಒಳಗೆ ಹದಿನಾರು ತಲೆಗಳು. ಮೂವತ್ತೆರಡು ಬ್ಯಾಗುಗಳು - ಊಟದ್ದೊಂದು, ಪಾಠದ್ದೊಂದು.

'ಎಷ್ಟು ಮಕ್ಕಳೂ?' ಎಂದ ಜಬರುದಸ್ತಿನಿಂದ

'ಎಳ್ಡೆಣ್ಣು ಒಂದು ಗಂಡು' ಎಂದ ಆಟೋರಾಜ

'ಏಯ್, ನಿಂಗಲ್ವೋ ನಾನು ಕೇಳಿದ್ದು. ರಿಕ್ಷಾ ಒಳಗೆ ಎಷ್ಟು ಮಕ್ಕಳಿದ್ದಾರೆ?'

'ಅದ್ನೆಂಟಿಪ್ಪತ್ತಿರಬೋದು ಬುದ್ದೀ'

'ಎಷ್ಟು ಜನ ಇರಬೇಕು?'

'ಮೂರು ದೊಡ್ಡ ಕುಳ ಅತ್ವಾ ಆರು ಮಕ್ಳು, ಇಲ್ಲಾ ಇಬ್ರು ದೊಡ್ಡೋರು ಎಳ್ಡು ಮಕ್ಕಳು, ಇಲ್ಲ....'

'ಸಾಕು ಸಾಕು. ನಡಿ ಸ್ಟೇಷನ್‌ಗೆ'

ಅತ್ತಿ ''ಸಾರೂ. ನಿಮಗಿಲ್ಲ ಅನ್ನಾಕಾಯ್ತದಾ?'

ಪೋಲೀಸಪ್ಪ ಉಬ್ಬಿಹೋದ. 'ಹಾಗೆ ಬಾ ದಾರೀಗೆ' ಅನ್ನೋ ರೀತಿ ತನ್ನ ಮೀಸೆ ಮೇಲೆ ಕೈ ಆಡಿಸಿಕೊಂಡ.

'ಏಯ್ ಸೊಲ್ಪ ಜರೀಕ್ಕೊಳ್ರೋ' ಅಂತಂದ ಪೋಲೀಸು, ಮಕ್ಕಳನ್ನ ಹಾಗೆ ಹೀಗೆ, ಮೇಲೆ ಕೆಳಗೆ, ಹಿಂದೆ ಮುಂದೆ ದೂಡಿ ದೊಂಬರು ಮೊಳದಗಲದ 'ರಿಂಗ್' ನೊಳಗೆ ತಮ್ಮ ಇಡೀ ದೇಹಾನ ತೂರಿಸೋ ಹಾಗೆ ರಿಕ್ಷಾದೊಳಗೆ ತನ್ನ ಶರೀರವನ್ನು ತುರುಕಿದ. ಎರಡು ಮಕ್ಕಳನ್ನು ತೊಡೆಮೇಲೆ ಕೂರಿಸಿಕೊಂಡು 'ನಡಿ' ಅಂದ!

ಗವಿ ಎಂದೊಡನೆ ಕವಿದ ವಿಚಾರಗಳು

– ಅನಂತ ಕಲ್ಲೋಳ

'ಧರ್ಮದ ತತ್ವವು ಗವಿಯೊಳಗಡೆ ಹುದುಗಿಹುದು, ಹಿರಿಯರು ಹಾಕಿದ ದಾರಿಯಲಿ ಸಾಗುವುದು' ಎಂಬರ್ಥದ ಸಂಸ್ಕೃತ ಸುಭಾಷಿತವಿದೆಯಷ್ಟೆ; ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಏನ ಗತಸ್ಸಪಂಥಾಃ' ಎಂದು!

ಧರ್ಮದ ಮರ್ಮ ಹೀಗೆ ಗುಹೆಯಲ್ಲಿ ಹುದುಗಿರುವಾಗ ಗೃಹವಾಸಿಗಳಾದ ನಮ್ಮಂಥ ಸಾಮಾನ್ಯರಿಗೆ ಧರ್ಮದ ಮರ್ಮ ತಿಳಿಯುವುದು ಹೇಗೆ? ಅಂತ ಗುಂಡಣ್ಣನಿಗೆ ದೊಡ್ಡ ಸಮಸ್ಯೆ ಎದುರಾಯಿತು. ಇಷ್ಟು ದಿನ ಕಾಡದ ಈ ವಿಷಯ ಈಗ ಧುತ್ತೆಂದು ಉದ್'ಭೂತ'ವಾಗಿ ಕಂಗೆಡಿಸಿತ್ತು. ಈಗ ಏಕೆ ಅಂತಂದರೆ ಪ್ರಸ್ತುತದಲ್ಲಿ ಬೀಸುತ್ತಿರುವ ಸ್ವಯಂ ಪ್ರೇರಣೆಯ ನಿವೃತ್ತಿ ಯೋಜನೆಯ ಪ್ರಯೋಜನ ಪಡೆದಿರುವ ಗುಂಡಣ್ಣ. ಇಷ್ಟು ವರ್ಷಗಳ ಪ್ರವೃತ್ತಿಪರ ಜಂಜಾಟದಲ್ಲಿ ಏಗಿ ಸುಸ್ತಾದವ, ಈಗ ನಿವೃತ್ತಿ ಮನೋಭಾವ ಹೊಂದಿ ಪರಮಾತ್ಮ, ಪಾರಮಾರ್ಥ ಮೊದಲಾದ 'ಪರ'ದ ಚಿಂತೆಯನ್ನು ನಡೆಯಿಸಿ ಪರಮಶಾಂತಿಯನ್ನು ಪಡೆಯುವ ಹವಣಿಕೆಯಲ್ಲಿದ್ದಾನೆ.

'ಅಧ್ಯಾತ್ಮ ಸಾಧನೆಗೆ ವ್ಹಿ.ಆರ್.ಎಸ್. ಒಳ್ಳೆಯ ಅವಕಾಶ ಒದಗಿಸಿದೆ' ಎಂದು ಗುಂಡಣ್ಣ ಉಲಿದಾಗ ನಾನು 'ಆSS?' ಎಂದು ಅಚ್ಚರಿಯಿಂದ ಬಾಯ್ದೆರೆದೆ. ಆ ಮೇಲೆ 'ಆSS' ಆಕಾರದ ಆ ಬಾಯಿಯಿಂದಲೇ.

'ಆSS. ಆಧ್ಯಾತ್ಮದ ಅನುಸಂಧಾನ ನಡೆಸಿರುವೆ ಏನು?' ಎಂದು ಆಶ್ಚರ್ಯಚಕಿತನಾಗಿ ಕೇಳಿದೆ. ಅದೇ ಹಂತದಲ್ಲಿ 'ಹಾದಿ ಮುಪ್ಪಾಗಿ ಹಳ್ಳವಾಯಿತು, ಸೂಳೇ ಮುಪ್ಪಾಗಿ ಜೋಗತಿಯಾದಳು' ಎಂಬ ಗಾದೆಮಾತು ಮನದಲ್ಲಿ ಸುಳಿಯಿತು.

'ಆಧ್ಯಾತ್ಮ ಅಲ್ಲ; ಅಧ್ಯಾತ್ಮ!' ಗುಂಡಣ್ಣ ನನ್ನ 'ಆ' ಕಾರಕ್ಕೆ ತಕ್ರಾರ್ ತೆಗೆದ. ತನ್ನ ಕೈಯ್ಯಲ್ಲಿದ್ದ ವಾರಪತ್ರಿಕೆಯನ್ನು ಝಳಪಿಸುತ್ತ, 'ಇಲ್ನೋಡು ಹಿರಿಯ ಸಾಹಿತಿಗಳಾದ ಶ್ರೀಮಾನ್ ಘಾರವರೇ ಆಧ್ಯಾತ್ಮ, ಆಧ್ಯಾತ್ಮ ಅಂತ. ಬರೆದಿದ್ದಾರೆ' ಎಂದು ನಾನು ನನಗಾದ ಆಘಾತಕ್ಕೆ ಪ್ರತ್ಯಾಘಾತ ಒಡ್ಡಿದೆ.

ಅವರು ಆಧ್ಯಾತ್ಮದಲ್ಲಿ ಬಹಳ ಸಾಧನೆ ಮಾಡಿರಬೇಕು. ಅದನ್ನು ಸಾರುವುದಕ್ಕಾಗಿ ಬಹುಶಃ ಆSSಧ್ಯಾತ್ಮ ಅಂತ ಬಾಯಿ ಹರವು ಮಾಡಿ ಉಚ್ಚರಿಸುತ್ತಿರಬೇಕು. ಕನ್ನಡವಾಗಲಿ, ಸಂಸ್ಕೃತವಾಗಲಿ, ಯಾವುದೇ ನಿಘಂಟು ತೆಗೆದು ನೋಡು, ಅಧ್ಯಾತ್ಮ ಎಂಬುವುದೇ ಶುದ್ಧ ರೂಪ ಅಧಿ+ಆತ್ಮ=ಅಧ್ಯಾತ್ಮ. ಅತಿಯಾದ ಆವೇಶದಿಂದ

'ಅ' ಕಾರವು 'ಆ' ಕಾರ ತಳೆದು ವಿಕಾರಗೊಂಡಿರಬಹುದು. ಅಧ್ಯಾತ್ಮ ವಿಕಾರಗೊಳ್ಳುವುದು ಸುತರಾಂ ಸರಿ ಅಲ್ಲ; ಓಂ ಸ್ವಸ್ತಿ ಗುಂಡಣ್ಣ ಅಧ್ಯಾತ್ಮದ ನಿಜ ರೂಪವನ್ನು ಬಿಂಬಿಸಿದ. ನನಗೆ ಮತ್ತಷ್ಟು ಆಶ್ಚರ್ಯವಾದರೂ ಈ ಸಲ 'ಆ' ಎಂದು ಬಾಯಿ ತೆರೆಯುವ ಧೈರ್ಯ ಮಾಡಲಿಲ್ಲ. ಆತ ಧರ್ಮಕ್ಕೆ, ಅಂತಂದರೆ ಹೀಗೆ ಬಿಟ್ಟಿಯಾಗಿ, ಭಾಷಾಶುದ್ಧಿಯ ಪಾಠ ಹೇಳುವಾಗ ತಕರಾರು ಎತ್ತದೇ ನನ್ನ ತಪ್ಪು ತಿದ್ದುಕೊಳ್ಳುವುದೇ ಸೂಕ್ತ ಎಂದು ಬಗೆದೆ.

'ಧರ್ಮದ ಮರ್ಮ ಗೊತ್ತಾಯಿತೇನು ನಿನಗೆ?' ಗುಂಡಣ್ಣ ನನ್ನೆಡೆಗೆ ಪ್ರಶ್ನೆಯ ಗುಂಡೆಸೆದ.

'ಊಂ ಹ್ಞೂಂ' ನಾನು ತಲೆಯನ್ನು ಅಡ್ಡಡ್ಡ ಆಡಿಸಿದೆ. ಯಾರಾದರೂ ಧರ್ಮದ ಸುದ್ದಿ ಎತ್ತಿದರೆ ನಾನು ಈ ಕರ್ಮವನ್ನು ಎಸಗುತ್ತೇನೆ. ಇದನ್ನು ತಾವು ಧರ್ಮ ಕರ್ಮ ಸಂಯೋಗ ಎಂದು ಅಂದರೂ ಆದೀತು!

'ಧರ್ಮದ ಮರ್ಮವು ಗವಿಯೊಳಗೆ ಹುದುಗಿಹುದು ಹಿರಿಯರು ಹಾಕಿದ ದಾರಿಯಲಿ ಸಾಗುವುದು....' ಗುಂಡಣ್ಣ ಶ್ಲೋಕವನ್ನು ವಾಚಿಸುವಂತೆ ಘನಗಂಭೀರ ಸ್ವರದಲ್ಲಿ ಸಾರಿದನು.

'ಗವಿಯೊಳಗೆ ಹುದುಗಿದೆಯೇ? ಹುದುಗಿರಬಹುದು; ಏಕೆಂದರೆ ಧರ್ಮಧುರಂಧರ ಒಸಮಾ ಬಿನ್ ಲಾಡೆನ್ ಅಫಗಾನಿಸ್ತಾನದ ಗಿರಿಕಂದರಗಳ ಗುಹೆಯಲ್ಲಿಯೇ ಅವಿತುಕೊಂಡಿದ್ದಾರೆ ಅಂತ ಸುದ್ದಿ. ವಿ ವಿಲ್ ಸ್ಮೋಕ್ ಔಟ್ ಆಫ್ ದ್ ಹೋಲ್ ಅಂತ ಬುಷ್ ಮಹಾಶಯ ಬುಸುಗುಟ್ಟಿದ್ದಾನೆ' ನಾನು ಗುಂಡಣ್ಣನನ್ನು ಅಧ್ಯಾತ್ಮದ ಗುಹೆಯಿಂದ ಹೊರತರಲೆಂದು ಸುದ್ದಿಪತ್ರಿಕೆಯ ಹೊಗೆ ಹರಡಿದೆ. ಆತ ಪತ್ರಿಕೆಯನ್ನು ಆಚೆ ಸರಿಸಿ,

'ಗವಿಯಲ್ಲಿ ಧರ್ಮದ ತತ್ವ ಅಡಗಿಸಲ್ಪಟ್ಟಿದೆ ಎಂಬ ಸೂಕ್ತಿಯಿಂದ ನಾನು ಅಡಚಣೆಯಲ್ಲಿ ಬಿದ್ದಿರುವೆನು' ಎಂದು ಗುಂಡಣ್ಣ ನಿಟ್ಟುಸಿರುಗರೆದ.

'ನಿನಗ್ಯಾಕೆ ಅಡಚಣೆ ಉಂಟಾಗಿದೆಯೋ ಮಾರಾಯ? ಧರ್ಮದ ತತ್ವಗಳು ಗವಿಯಲ್ಲಿಯೇ ಇರಲಿ ಅಥವಾ ಹಗೇವುನಲ್ಲಿಯೇ ಹುದುಗಿರಲಿ ನಿನಗ್ಯಾಕೆ ಅವುಗಳ ಚಿಂತೆ? ಋಷಿ ಮುನಿಗಳು, ಸ್ವಾಮಿ ಸಂನ್ಯಾಸಿಗಳು ಗವಿಯಲ್ಲಿ ಹೊಕ್ಕು ಜಪತಪ ಮಾಡ್ತಾರೆ, ನೀನೋ ಸಂಸಾರಸ್ಥ ಶ್ರೀ ಸಾಮಾನ್ಯ' ನಾನಂದೆ.

'ಶ್ರಿ ಸಾಮಾನ್ಯನಲ್ಲ ಶ್ರೀ ಇಲ್ಲದ ಸಾಮಾನ್ಯ ಧರ್ಮದ ತತ್ವ ಗವಿಯಲ್ಲಿ ಅಡಗಿದೆ ಎಂಬ ಸ್ಟೇಟ್‌ಮೆಂಟಿನಿಂದ ಒಂದು ಪ್ರಶ್ನೆ ಉದ್‌ಭೂತವಾಗ್ತದೆ....'

'ಉದ್‌ಭೂತವಾದರೆ ದೇವರಿಗೆ ಅಡ್ಡ ಬೀಳು' ನಾನಂದೆ, ಆತನನ್ನು ಅರ್ಧಕ್ಕೆ ನಡೆಯುತ್ತ.

'ನೀನು ನಡುನಡುವೆ ಅಡ್ಡಡ್ಡ ಮಾತನಾಡಿದರೆ ನಿನ್ನನ್ನು ಗುಮ್ಮ ಬೇಕಾದೀತು ಹುಶಾರ್' ಗುಂಡಣ್ಣ ಗುದ್ದುವಂತೆ ತನ್ನ ಮುಷ್ಟಿ ಬಿಗಿದು ತೋರಿದ. ಆತನ ಮಾತಿನಲ್ಲಿ ಭೂತ, ಗುಮ್ಮ ಮುಂತಾದ ಪದಗಳು ಹೊಮ್ಮುತ್ತಿದ್ದವು ಹೊರತು ಬೊಮ್ಮನ ಸರಿಸಮ ನಾಮಗಳು ಚಿಮ್ಮುತ್ತಿರಲಿಲ್ಲ.

'ಗವಿ ಮತ್ತು ಕವಿ!' ಗುಂಡಣ್ಣ ಸಂಕ್ಷಿಪ್ತವಾಗಿ ಉಚ್ಚರಿಸಿ ನನ್ನೆಡೆಗೆ ಒಂದು ಅರ್ಥಪೂರ್ಣ ಕಟಾಕ್ಷ ಬೀರಿದ.

'ಅಹುದು ಗವಿ ಮತ್ತು ಕವಿ ಎರಡೂ ದುರ್ಗಮ್ಯ, ಅನಾಕಲನೀಯ, ರಹಸ್ಯಮಯ, ಗವಿಯಲ್ಲಿ ಕತ್ತಲೆ ಕವಿದಿರುತ್ತದೆ...' ನಾನಂದೆ.

'ಗವಿಯ ವಿಷಯ ಒಂದು ಕಥೆ ಕೇಳು, ಅದು ಸುಗಮವಾಗಿದೆ' ಗುಂಡಣ್ಣ ತನ್ನದೇ ಟ್ರಾನ್ಸ್‌ನಲ್ಲಿ ನುಡಿದ.

'ಕಥೆ ಹೇಳ್ತೀಯಾ ಹೇಳು' ನಾನು ಆನಂದಾತಿರೇಕದಿಂದ ಉಲಿದೆ; ಡಾನ್ಸ್ ಮಾಡೋದೊಂದೇ ಬಾಕಿ ಉಳಿದಿತ್ತು. ಕವಿಯ ಕವಿತೆಗಿಂತ ಗುಂಡಣ್ಣನ ಕಥೆ ತಿಳಿಯಲು ಸುಗಮ ಎಂದು ನನ್ನ ಎಣಿಕೆ.

''ಒಂದು ಮುದಿ ಸಿಂಹ ಓಡಾಡಲಾಗದೇ ಬೇಟೆಯಾಡಲಾಗದೇ ಹತಬಲವಾದಾಗ ಒಂದು ಉಪಾಯ ಹುಡುಕಿತು ಅದು ಒಂದು ಗವಿ ಹೊಕ್ಕು ನರಳಾಡುತ್ತ ಅಲ್ಲಿ ಬಿದ್ದುಕೊಂಡು ಹೊಟ್ಟೆ ಹಸಿದಾಗ ಗವಿಯ ಒಳಗಿಂದಲೇ ಕೂಗುತ್ತಿತ್ತು. 'ನಾನು ತಪಶ್ಚರ್ಯೆಗೆ ಕುಳಿತಿರುವೆನು, ಶಾಂತಿಯ ಸಾಧನೆಯಲ್ಲಿ ನಿರತನಾಗಿರುವೆನು. ಲೋಕಕಲ್ಯಾಣಕ್ಕಾಗಿ ಅಧ್ಯಾತ್ಮ ವಿಚಾರವನ್ನು ವಿಶದಪಡಿಸುವ ಧರ್ಮಕಾರ್ಯ ನಡೆಯಿಸಿರುವೆನು. ಪರಮಾರ್ಥ ಸಾಧಿಸಿಕೊಳ್ಳಬೇಕೆಂದಿರುವ ಪ್ರಾಣಿಗಳು ಒಳಬಂದು ನನ್ನ ಉಪದೇಶಾಮೃತ ಆಲಿಸಿ ಜೀವನ ಪಾವನ ಮಾಡಿಕೊಳ್ಳಬಹುದು'' ಆ ಸಿಂಹದ ಈ ಮಧುರ ಭಾಷಣದಿಂದ ಆಕರ್ಷಿತಗೊಂಡು ಅನೇಕ ಪ್ರಾಣಿಗಳು ಗವಿಯಲ್ಲಿ ಪ್ರವೇಶ ಮಾಡಿದವು. ಒಂದು ಸಲ ನರಿಯೊಂದು ಆ ದಾರಿಯಲ್ಲಿ ಹೋಗುತ್ತಿದ್ದಂತೇ ಸಿಂಹದ ಈ ವಿಜ್ಞಾಪನೆಯನ್ನು ಆಲಿಸಿತು. ಅದಕ್ಕೂ ಗವಿಯೊಳಗೆ ಹೋಗುವ ಪ್ರೇರಣೆ ಉಂಟಾಯಿತು. ಇನ್ನೇನು ಅದು ಗವಿಯೊಳಗೆ ಧಾವಿಸಬೇಕು ಎಂದೆನ್ನುವಾಗ ಗವಿಯ ಮುಂದಿನ ಕಾಲುದಾರಿಯಲ್ಲಿ ಒಡಮೂಡಿದ್ದ ಹೆಜ್ಜೆ ಗುರುತುಗಳನ್ನು ಗಮನಿಸಿತು. ಅನೇಕಾನೇಕ ಪ್ರಾಣಿಗಳು ಗವಿಯೊಳಗೆ ಹೊಕ್ಕದ್ದು ಕಾಲ ಹೆಜ್ಜೆಯ ಗುರುತುಗಳಿಂದ ನಿಖರವಾಯಿತು. ಮೊಲ, ಹಂದಿ, ನವಿಲು, ಒಂಟೆ ಮುಂತಾದವುಗಳಲ್ಲದೇ ಆನೆಯಂಥ ಮಹಾ ಮಹಾ ಪ್ರಾಣಿಗಳೂ ಗವಿ ಪ್ರವೇಶಿಸಿದ ಹೆಜ್ಜೆ ಗುರುತುಗಳಿದ್ದವು, ಆದರೆ ಅಚ್ಚರಿಯ ಸಂಗತಿ ಎಂದರೆ ಮರಳಿ ಬಂದ ಪ್ರಾಣಿಯ ಹೆಜ್ಜೆ ಗುರುತು ಒಂದೂ ಇರಲಿಲ್ಲ.

'ಒಳಹೊಕ್ಕ ಪ್ರಾಣಿಗಳೆಲ್ಲ ಮೋಕ್ಷ ಪಡೆದವು ಅನ್ನು' ನನಗೆ ಮೊದಲೇ ಗೊತ್ತಿದ್ದ ಈ ಕಥೆಯನ್ನು ಗುಂಡಣ್ಣನ ಬಾಯಿಂದ ಮತ್ತೊಮ್ಮೆ ಕೇಳಿದ ಬಳಿಕ ಪ್ರತಿಕ್ರಿಯಿಸಿದೆ.

'ರಾಮಣ್ಣ; ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ ಎಂಬ ಸುಭಾಷಿತಕ್ಕೂ ಈ ಕಥೆಗೂ ತಳಕು ಹಾಕಿದಲ್ಲಿ ಗವಿಯಲ್ಲಿ ಕವಿದ ಕತ್ತಲೆಯಲ್ಲಿ ಹುದುಗಿದ ಧರ್ಮವು ಯಾವ ಬಗೆಯ ಮೋಕ್ಷ ಪ್ರದಾಯಕ ಆದೀತು ಎಂಬುದರ ಬಗ್ಗೆ ಬೆಳಕು ಹರಿಯುತ್ತದೆಯಲ್ಲವೇ?' ಗುಂಡಣ್ಣನೆಂದ.

ಗುಂಡಣ್ಣನ ಈ ಪ್ರಶ್ನೆಯಿಂದ ನನ್ನ ತಲೆ ಗಿಮಿಗಿಮಿ ಎಂದು ಸುತ್ತತೊಡಗಿತು. ಧರ್ಮದ ಹೆಸರಿನಲ್ಲಿ ನಡೆದಿರುವ ಆರ್ಭಟ, ಅಟಾಟೋಪ, ಅಮಾಯಕರ ಸಂಹಾರ ಅಪರಂಪಾರ ಈ ಸುಭಾಷಿತ ಮತ್ತು ಆ ಕಥೆ ಇವುಗಳಲ್ಲಿ ಅನಿರ್ವಚನೀಯವಾದ, ಅದೃಶ್ಯವಾದ, ಸಾಂಕೇತಿಕತೆ, ಪ್ರತಿಮೆಯ ಹೊಳಹು ಇದೆ ಏನೋ ಎಂದನಿಸತೊಡಗಿತು. ನಾನೆಂದೆ.

'ಗುಂಡಣ್ಣಾ, ಭಗವಂತ ತನ್ನ ಮ್ಯಾನಿಫೆಸ್ಟೋ ಭಗವದ್ ಗೀತೆಯಲ್ಲಿ ನಾಲ್ಕನೇ ಅಧ್ಯಾಯದ ಎಂಟನೇ ನುಡಿಯಲ್ಲಿ ಹೀಗೆಂದು ಭರವಸೆ ನೀಡಿದ್ದಾನೆ.

ಸಾಧುಗಳನ್ನು ಸಲುಹಲೆಂದು ಕೇಡಿಗಳನ್ನು ಕೊನೆಗೊಳಿಸಲೆಂದು।

ಸಾಧಿಸಲು ಧರ್ಮಸ್ಥಾಪನೆಯನು ಯುಗಯುಗದಲಿ ನಾ ಹೊಮ್ಮುವೆ॥

ಆದರೆ ಆ ಮಾರಾಯ ಇನ್ನೂ ಯಾಕೆ ಬರಲೊಲ್ಲ. ಆತನ ಈ ಭರವಸೆಯೂ ನಮ್ಮ ಪುಢಾರಿಗಳು, ಮಂತ್ರಿಗಳು ನೀಡುವ ಭರವಸೆಯಂತೇ ಓಂ ಪುಸ್ಸ್ ಏನು?'

ಗುಂಡಣ್ಣ ನನ್ನೆಡೆಗೆ ಕನಿಕರದ ನೋಟ ಬೀರುತ್ತ ಇಂತೆಂದ: 'ನೀ ಉಲ್ಲೇಖಿಸಿರುವ ನುಡಿಗಿಂತ ಹಿಂದಿನ ನುಡಿಯಲ್ಲಿ ಪರಮಾತ್ಮ ಒಂದು ಕಂಡಿಷನ್ನು ನಮೂದಿಸಿದ್ದಾನೆ ಅದು ಹೀಗಿದೆ: ಎಂದಿಗೆಂದಿಗೆ ಧರ್ಮವು ತಾ ಕುಂದುವುದೋ ಅಧರ್ಮವು ಬಲಹೊಂದುವುದೋ ಅಂದಿಗಂದಿಗೆ ನನ್ನನು ನಾನೇ ಸೃಷ್ಟಿಗೊಳಿಸುವೆ ಎಲೈ ಭರತಶ್ರೇಷ್ಠನೇ॥ ಅಂದಮೇಲೆ ಧರ್ಮಗ್ಲಾನಿಯಾಗದೇ ಆತನ ಎಂಟ್ರಿ ಆಗುವುದಿಲ್ಲ. ಈಗ ಎಲ್ಲಾ ಕಡೆಗೆ ಧರ್ಮಜಾಗೃತಿ ದುಮುದುಮಿಸುತ್ತಿದೆ. ಧ್ವನಿವರ್ಧಕಗಳಲ್ಲಿ ಪ್ರಾರ್ಥನೆಯ ಕೂಗು, ದೇವರಿಗೆ ವಜ್ರ ಕಿರೀಟ, ಅದ್ದೂರಿಯ ಪೂಜೆ, ನಮಾಜು, ಹೋಮ, ಹವನ, ಪ್ರೇಯರ್, ಸರ್ಮನ್, ಪೈಪೋಟಿಯಿಂದ ಪಸರಿಸಿದೆ ಧರ್ಮಾಚರಣೆಯ ಪ್ರದರ್ಶನ. ಇಂಥಾಪರಿ ಧರ್ಮಜಾಗೃತಿಯ ಆರ್ಭಟದಲ್ಲಿ ಪರಮಾತ್ಮನ ಅವತರಣ ಅಶಕ್ಯ' ಗುಂಡಣ್ಣ ನನ್ನ ಟೀಕೆ ಟಿಪ್ಪಣಿಗೆ ಇಂತು ಅಪ್ಪಣೆ ಕೊಡಿಸಿದ. ಆತನ ತರ್ಕ ಸರಣಿಗೆ ನಾನು ಮೂಕನಾಗಿ ಶರಣ ಹೇಳಿದೆ. ಧರ್ಮಗ್ಲಾನಿಯಾದಾಗ ಬರುವ ಭಗವಂತ ಇಂಥಾ ಪರಿ ಧರ್ಮಜಾಗೃತಿಯ ಸಂದರ್ಭದಲ್ಲಿ ಕಾಣಸಿಗೋದು ಸಾಧ್ಯವಿಲ್ಲ ಅಂಬುವುದು ಮನದಟ್ಟಾಯಿತು.

ರಜಾ ತಂದ ಮಜಾ

– ಎಸ್ರಾಮ್ಮೂರ್ತಿ

'ಇವತ್ತು ಸೂಟಿಂಗೆಂಬ ಸಜಾ ಇಲ್ಲ, ರಜಾ' ಎಂದು ತಿಳಿದೊಡನೆ ಟೀಮಿನ ನಟನಟೀಮಣಿಯರ ಮನಗಳಲ್ಲಿ ದಿನ ಕಳೆಯುವ ವಿವಿಧ ಯೋಜನೆಗಳು ಮಂಡಿತವಾದುವು. ಹಲವು ಭಾರತೀಯರ ಆದರ್ಶ ನವಕೋಟಿ ನಾಯರಾಯಣರೂ, ಆಟಕ್ಕೆ ಆರು ದಾಖಲೆ ಮುದುಕರೂ (ಅಜೇಯರಂತೂ ಅಲ್ಲ!) ಆದ ನಮ್ಮ ಕ್ರಿಕೆಟಿಗರು ಪರದೇಶಿಗಳಾದಾಗ ಐದು ದಿನಗಳ ಟೆಸ್ಟನ್ನು ಮೂರರಲ್ಲೇ ಮುಗಿಸಿಬಿಡುವ 'ಕೈ-ಛಳುಕನ್ನು' ತೋರಿದ ಮೇಲೆ ಉಳಿದ ಎರಡು ದಿನ ಹೇಗೆ ಕಳೆದಾರು? ಕೆಲವು ಪ್ಲೇಯರುಗಳು ಮೈಮೂಳೆ ಕೀಲುಗಳ 'ಎಕ್ಸ್-ರೇ' ತೆಗೆಸಿಕೊಳ್ಳುವ ನೆಪ ಹೂಡಿಯಾರು... ಉಳಿಕೆಯವರು ಸೋತದ್ದು 'ವೈ-ರೇ' ಎಂದು ಕೋಚುಮ್ಯಾನೇಜರೇತರರೊಡನೆ ಕ್ರಿ(ಕೆ)ಟಿಕಲ್ಲಾಗಿ ಜಾಲಾಡಿಕೊಂಡಾರು...., ಅಥವಾ ಪುಂಗನೂರು ಮೈದಾನದ ಮಗ್ಗುಲ ಗಣೇಶನನ್ನು ವಿಕೆಟ್ಟಾಗಿಸಿಕೊಂಡು ಮ್ಯಾಚುಗೆದ್ದು, ಜಯಭೇರಿತಾಡಿಸಿ ಸ್ವಯಂವಂದಿತ ಎಕ್ಸ್‌ಪರ್ಟ್‌ಗಳಾಗಿ ಮೆರೆಯುವ ಪೇಪರು ಅಥವಾ ಟೀವಿ ರಿಪೋರ್ಟರುಗಳಿಂದ ಮುಂದೆ ಹೇಗೆ ಆಡಬೇಕು ಎಂಬುದನ್ನು ಕಲಿತೂಬಿಟ್ಟಾರು! ಆದರೆ ಇಲ್ಲಿ ಮ್ಯಾಚಿಗೆ ಮೊದಲೇ 'ಮಾಯಮ್ಮನ ಮಳೆ' ಸುರಿದು ಪ್ಲೇಯರುಗಳು ಮೈದಾನಕ್ಕೇ ಇಳಿಯಲಿಲ್ಲವಲ್ಲ!

ತನ್ನ ರೀಸರ್ಚ್‌ವರ್ಕು ಒಂದು ದಿನ ಹಿಂದೆ ಬಿದ್ದ ಚಿಂತೆಯಲ್ಲಿ ರಂಗಣ್ಣ ಸುಖನಿವಾದಲ್ಲಿ ನಿಂತರೆ, ತನ್ನಮೇಲೆ ಇನ್ನಷ್ಟು ಜೋಕುಗಳನ್ನು ಕಟ್ಟಿ-ಬಿಟ್ಟಾನು ಎಂಬ ಭಯದಿಂದ ಸರಸು ಪರ್ಯಾಯಕ್ರಮ ಸೂಚಿಸಿದಳು.

'ರ್‍ರೀ, ಗುಂಡಣ್ಣ ಹೇಳಿದ ಹಾಗೆ ಬೇಲೂರು ನೋಡಿ ಬರೋಣವೇ?' ರಂಗಣ್ಣನ 'ಅಸ್ತು' ಒಡನೆಯೇ ದೊರಕಿತು. ಆದರೆ ಇಬ್ಬರೇ ಹೊರಟರೆ, ದೊಡ್ಡಬಳ್ಳಾಪುರದಲ್ಲಿ ಮದುವೆಯಾದ ಮಾರನೆಯದಿನ ನಂದಿಯ ಔಟ್‌ಡೋರ್‌ನಲ್ಲಿ ಲಿಮಿಟೆಡ್ ಆಗಿ ನಡೆಸಿದ ಹಗಲು ಹನೀಮೂನಿನ ನೆನಪಾಗಿಬಿಟ್ಟೀತು ಎಂದು ಶಿವಾಜಿ, ಶೇಖರರನ್ನೂ ಆಹ್ವಾನಿಸಿದರು. ಅವರುಗಳು ತುಸು ಸಂಕೋಚದಿಂದಲೇ ಕರಡಿಗಳಾಗಲು ಸಮ್ಮತಿ ಸೂಚಿಸಿದ್ದನ್ನು ಕೇಳಿಸಿಕೊಂಡ ಇಬ್ಬರು ಹೆಂಗಳೆಯರು. ತಾವೂ ಜೊತೆಗೆ ಬರಲು ಇಚ್ಛಿಸಲು, ಟ್ರಿಪ್ಪು - ಪಾರ್ಟಿ

ಅಪ್ರೂವ್ ಆದುವು. ಶೇಖರ 'ಸ್ವಲ್ಪ ಬಂದೆ' ಎಂದು ಒಳಗೋಡಿದವನು, ಎರಡು ನಿಮಿಷಗಳಲ್ಲಿ ಹೊರಗೆ ಬಂದು ಅನೌನ್ಸ್ ಮಾಡಿದ: 'ರಸಿಂಗ್ ಹೇಳಿದಾನೆ, ಇನ್ನು ಹತ್ತು ಹದಿನೈದು ನಿಮಿಷದಲ್ಲಿ ನಮಗೆಲ್ಲ ಚಪಾತಿ - ಪಲ್ಯ, ಮೊಸರನ್ನ ರೆಡಿ ಮಾಡಿಕೊಡ್ತಾನಂತೆ. ಅವನದ್ದೇ ನಳಪಾಕ ಕತ್ತರಿಸಿ ಹೋಟೆಲಿನವರಿಗೆ ಬಲಿಕೊಡುವ 'ಹೆಲ್ತು, ವೆಲ್ತು' ಎರಡನ್ನೂ ಕಾಪಾಡಿಕೊಳ್ಳಬಹುದಂತೆ!' ಎಲ್ಲರೂ 'ಜೈರುಸಿಂಗ!' ಎಂದುಕೊಂಡು, ಕೆಲವು ನಿಮಿಷಗಳಲ್ಲಿ ಅವ ಸಿದ್ಧಗೊಳಿಸಿಕೊಟ್ಟ 'ನಳ-ಪ್ಯಾಕ'ನ್ನು ಹೊತ್ತು ಬಸ್ಸ್ಟ್ಯಾಂಡಿಗೆ ಬಿಜಯಂಗೈದು ಬಸ್ಸಿಗೆ ಕಾದು ಕೂತರು.

ಕೂತಿರುವಲ್ಲಿಂದಲೇ ಚರ್ಮವ್ಯಾಧಿಚೂರ್ಣ, ಗುಟ್ಕಾ ಘುಟಿ, ಸೌಂದರ್ಯವರ್ಧಕ ಸಾಬೂನುಗಳೇ ಇತ್ಯಾದಿ ಬೋರ್ಡುಗಳನ್ನು ನೋಡಿ ಜ್ಞಾನದಾಹಿಗಳಾದರು; ಅಭಯಾರಣ್ಯದ ಆನೆಮರಿಗಳಂತೆ ಅಲೆದಾಡುತ್ತ, 'ಗೋ' ಎಂದರೂ ಕೇಳದೆ ತಿವಿಯಲು ಮುನ್ನುಗ್ಗುವ ಗೋ ಸಮೂಹಕ್ಕೆ ಬೆದರಿಬಿದ್ದರು; 'ದೇಕುತೆರೇ ಸಂಸಾರಕಿ ಹಾಳತು' ಎಂದು ಸಂಸಾರತಾಪತ್ರಯವನ್ನು ನೆನೆಪಿಸಿ ಹಾಡುತ್ತ ಬಂದ ತಾತ, ಮೊಮ್ಮಗಳ ಕಾಣುವ ಕಣ್ಣ ಕುರುಡು, ಇಲ್ಲದ ಕುಂಟನ್ನು ವಿಶ್ಲೇಷಿಸಿ, 'ಧಾರಾಳವಾಗಿ ಭಿಕ್ಷೆ ನೀಡದ ಗೋರ್ಕಲ್ಲು'ಗಳಾದರು. ತೆಲುಗಿನಲ್ಲಿ ಬೈಸಿಕೊಂಡರು.

ಶೇಖರ ಹತ್ತಿರದ ಲಚ್ಚೆ ಅಂಗಡಿಗೆ ಹೋಗಿ

ಹಿತವಾಗಿದ್ದ ಹಾಸನದ 'ಸನ್‌ಶೈನಿಗೆ' ಒಂದು 'ಹಾಸನ್ ಟೋಪಿ' ಅರಸಿದ. ಬೆಂಗಳೂರು ರಸೆಲ್‌ಮಾರ್ಕೆಟ್ ಬಳಿ ತಯಾರಾಗುವ 'ವರ್ಜಿನಲ್' ಟೋಪಿ ಮಾಲು ಸಪ್ಲೆ ಇಲ್ಲ, ಎಂದರಿತ. ಅಷ್ಟರಲ್ಲೇ ಬಸ್ ಬಂದದ್ದರಿಂದ ವಿಚಾರಣೆ ನಿಲ್ಲಿಸಿ ಓಡಿಬಂದು ಎಲ್ಲರೊಡನೆ ಬಸ್ಸೇರಿದ. ಎಲ್ಲರ ಟಿಕೆಟ್‌ಕೊಳ್ಳಲು ರಂಗಣ್ಣ ನೀಡಿದ ರಕಮ್ಮನ್ನು ಅವನಿಗೇ ಹಿಂತಿರುಗಿಸಿದ್ದಲ್ಲದೆ ಅವರಿಬ್ಬರ ಚಾರ್ಜನ್ನೂ ತಾವೇ ತೆತ್ತು ಸರಸೂವನ್ನು ಕಸಿವಿಸಿಗೊಳಿಸಿದರು, ಶಿವಾಜಿ - ಶೇಖರ ದ್ವಯ.

ಅಲ್ಲದೆ, ಬಸ್ಸಿನಲ್ಲಿ ಹರಟುತ್ತ ಶಿವಾಜಿ, ಶೇಖರ ತಮ್ಮ 'ಸಹ-ಪ್ರಯಾಣಿಕೆ'ಯರ ಜೀವನ ಚಿತ್ರಣ ನೀಡಿದರು. ಸಂಗೀತದಲ್ಲಿ ಹೆಚ್ಚು ಆಸಕ್ತಿಯಿದ್ದ ಭಾಗವತರ ದಾಸಪ್ಪ ತನ್ನ ಮೂವರು ಹೆಣ್ಣುಮಕ್ಕಳಿಗೆ ಕ್ರಮವಾಗಿ 'ಮಧುರ ವಾಣಿ, ಕೋಕಿಲ ವಾಣಿ, ಮಂಜುಳವಾಣಿ' ಎಂದು ಹೆಸರಿಟ್ಟ. ಅವರೆಲ್ಲರೂ ಮುಂದೆ ಆಕಾಶವಾಣಿ ಕಲಾವಿದೆಯರಾಗಲೆಂಬುದು ಅವನ ಮಹದಾಸೆ.

ಶೇಖರ ಹೇಳಿದ: ''ಹಿರಿಯವಳು ಮದ್ದೂರಿನಲ್ಲಿ ಲವರು ಸೆಕೆಂಡರಿ ಓದುವಾಗಲೇ ಓದನ್ನು ಸೆಕೆಂಡರಿಯಾಗಿಸಿ ತನ್ನ ಲವರನ್ನು ಕಂಡುಕೊಂಡಳು.

ಅವಳ ಭಕ್ತನಾದವನು ಆಲೇಮನೇಲಿ ಕಬ್ಬಿನ ಗಾಣದೆತ್ತು ಹೊಡೀತಿದ್ದ, ಪದ ಹಾಡಿಕೋತ - (ಅಲ್ಲದೆ ರೆಬೆಲ್‌ಸ್ಟಾರಿನ ದೂರದ ನೆಂಟ ತಾನು, ಎಂದೂ ಬೊಗಳಿದ್ದ) ತನ್ನ ಗಾನಸುಧಾರಸಕ್ಕೆ ಸವಿಯೂಡಿಸಿ ಕಬ್ಬಿನ ರಸವಾಗಿಸಲು ಇವಳ ಮಧುರವಾಣಿಯೇ ಸರಿಯೆಂಬ ಗೀಳಿನಲ್ಲಿ ಅವಳನ್ನು ಬಯಸಿದ, ದಿನಾ ಸ್ಕೂಲಿಂದ ಮನೆಗೆ ಬರೋವರೆಗೂ ಓಲೈಸಿದ, ಅವಳ ಮನವೊಲಿಸಿದ, ತನ್ನ ಮಾವನ ನಂಬರ್ ಒಂದರ ಕನ್ಯಾಸೆರೆ ಬಿಡಿಸಿಯೇ ಬಿಟ್ಟ! ಹೀಗಾಗಿ ಮಧುರವಾಣಿ ಮದ್ದೂರು ಓಣಿ ಸೇರಿಕೊಂಡಳು!

ಇನ್ನು ಕೋಕಿಲಾ ಕತೆ. ಬಣ್ಣದಲ್ಲಿ ಅಪ್ಪಟ ಕೋಗಿಲೆ, ಆದರೂ ಲಕ್ಷಣವಾದ ಹೆಂಗಸು... ನೀವೇ ನೋಡಿದೀರಲ್ಲಾ.... ಕಂಠಮಾತ್ರ ಕೋಗಿಲೆಯ ಸಾಕುತಾಯಿಯ ವರಪ್ರಸಾದವೇ! ಮೂರನೆಯವಳಿಗೆ, ಅದೇ ಮಂಜುಳಮ್ಮ, ಲಗ್ನ ನಿಷ್ಕರ್ಷೆ ಆಗಿದೆ. ಅಕ್ಕನಿಗೋಸ್ಕರ ಕಾಯ್ತಾ ಇದಾಳೆ, ಬಿಡುಗಡೆ ಆಗೋಕೆ. ಒಳ್ಳೇ ಕಲಾವಿದೆ ಸಾರ್. ಈ ಮಾಯಾ ಹೆಂಗ್ಸು ಗುಂಡೇಶಣ್ಣನ ರೆಕಮಂಡೇಷನ್ನಿಂದ ಬರ್ದೇ ಇದ್ದಿದ್ರೆ, ರಾಮಚಂದ್ರ ಇವಳನ್ನೇ ಹೀರೋಯಿನ್ ಮಾಡ್ತಿದ್ರು. ಆದ್ರೂ ಬೇಜಾರು ಮಾಡಿಕೊಳ್ಳದೆ ಅಕ್ಕನ ಜೊತೆ ಬಂದಿದಾಳೆ ನೋಡಿ, ದೊಡ್ಡ ಗುಣ ಅವಳದ್ದು. ಅಲ್ಲದೆ ಮರ್ಯಾದಸ್ತ ಹುಡುಗೀರೂ ಸಾರ್, ನಿಮ್ಮ ಗುಂಡೇಶನಿಂದ ದೂರಾನೇ ಇರ್ತಾರೆ.

'ಪರವಾಗಿಲ್ಲ, ಸರ್ಟಿಫಿಕೇಟು ಚೆನ್ನಾಗೇ ಕೊಡ್ತೀರ' ಎಂದು ರಂಗಣ್ಣ ಬಾಯಿಬಿಡುವಾಗಲೇ ಬೇಲೂರು ತಲಪಿಯಾಯ್ತು.

ಪುರಾತತ್ವ ಶಾಸ್ತ್ರಿಗಳ ಇಲಾಖೆಯಿಂದ ಅಧಿಕೃತ ಹಣೆಪಟ್ಟಿ ಕಟ್ಟಿಸಿಕೊಂಡ ಎಲ್ಲ ಸ್ಥಳಗಳ 'ಟೂರಿಸ್ಟ್ ಆಕರ್ಷಣೆಗಳು ಅಲ್ಲಿಯೂ ಹಾಜರಿವೆ. ಎಷ್ಟು ನೋಡಿದರೂ ಮನತಣಿಯದ ಮದನಿಕೆಯರಿಗೆ ಅಲಂಕಾರವಾಗಿ ಎಷ್ಟು ತಳ್ಳಿದರೂ ದೂರ ಸರಿಯದೆ ತಲೆ ತಿನ್ನುವ ಗೈಡುಗಳು, ಸ್ವದೇಶೀಯರು - ಅದರಲ್ಲೂ ಕರುನಾಡಿನ ಮುಂದೆ, ಲೋಕಲ್ ಬಕರಾ ಬಂಧುಗಳನ್ನೂ ಗುರುತಿಸಿಕೊಳ್ಳದೆ ಪರಕೀಯರನ್ನು ಕೇಳುವಂತೆ ಸೆಣಸಿದರು. ಸ್ಮರಣೆಗಳನ್ನು - ಕೀ ಚೈನು, ಕಲ್ಲಿನ ಸರ ಇತ್ಯಾದಿಗಳು ತಲೆಗೆ ಕಟ್ಟುವ ಸೇಲ್ಸ್‌ಮೆನ್ನುಗಳ ಕಣ್ಣುತಪ್ಪಿಸಿ ನಡೆದರು. ಘಾಟಿಗಳು ಮಾರಾಟಕ್ಕಿಂತ ನಾಡಿ ಬಿಸಲೇರಿ ಬಾಟಲಿಗಳನ್ನು ಬರಿ ನೋಟದಲ್ಲಿಯೇ ಕಂಡು ಮನ ತಂಪಿಸಿಕೊಂಡರು. ಹಲವು ತರಹದ ಕ್ಯಾಮರಾಗಳನ್ನು ಹಿಡಿದು ಗುಂಪುಗುಂಪಾಗಿ ನಡೆದು 'ಓಹ್! ದೀಸ್ ಬ್ಯೂಟಿಫುಲ್ ಇಂಡಿಯನ್ ವಿಮೆನ್!' ಎಂದು ಪೆಚ್ಚು ಪೆಚ್ಚಾಗಿ ಕಚ್ಚೆಪಂಚೆ ಪುಳುಜುಟ್ಟುಧಾರಿ ಅಚ್ಚಂಭಟ್ಟರುಗಳ ಫೋಟೋಗಳನ್ನು ಮೆಚ್ಚಿ

ತೆಗೆದಿಟ್ಟುಕೊಳ್ಳುವ - ನಮಗೆ ಗಂಡೋ ಹೆಣ್ಣೋ ಗುರುತು ಸಿಗದ ಜೀನ್ಸ್‌ಧಾರಿ ಬಿಳಿಯರು ಬಸ್ ಲೋಡುಗಳಲ್ಲಿ ಬಂದಿದ್ದರು. ಅಂತಹವರಿಗೆ ಕರ್ನಾಟಕದ ಸಂಸ್ಕೃತಿ ಪರಂಪರೆಯನ್ನು ಯಾವ 'ಎನ್‌ಸೈಕಲ್ಲೋಪೀಡಿಯಾ' ದಲ್ಲೋ ದೊರಕಿಸಿಕೊಂಡ ವೊಕ್ಯಾಬುಲರಿಯನ್ನು ತೋರಿ - ಬಸ್ಸಿನಿಂದಲೇ ಪರಿಚಯಿಸಿಕೊಂಡು ಬಂದ ಕಲಾಸಿಪಾಳ್ಯವಾಸಿ ಬಸ್ ಕಂಡಕ್ಟರುಗಳ 'ಖಿಸ್ಸೆಡಥಸ' ಕೇಳಿ ನಿಬ್ಬೆರಗಾದರು.

ಶೇಖರ ಅಂತೂ ಸುಸ್ತಾಗಿಬಿಟ್ಟ: 'ಅವನು ಡೈಲಾಗ್ ಹೊಡೆಯೋ ಧೈರ್ಯ ನೋಡಿ, ಸಾರ್!... ಬೇಲೂರಿನಲ್ಲಿ ಶಾಂತಲಾದೇವಿ ಡ್ಯಾನ್ಸ್ ನೋಡೋಕೆ ವಾರವಾರ ಟಿಪ್ಪು ಸುಲ್ತಾನ್ ಕುದುರೆಮೇಲೆ ಬರ್‍ತಾ ಇದ್ನಂತೆ... ಇವನ ಮುತ್ತಾತ ಆಗ ಸುಲ್ತಾನನ ಮಂತ್ರಿ ಆಗಿದ್ನಂತೆ... ಈ ಕಥೇನ ಮುದುಕ ಇವರಪ್ಪಂಗೆ ಹೇಳಿದ್ನಂತೆ... ಒಂದೇ ಏಟಿಗೆ ಚರಿತ್ರೆ, ಭೂಗೋಳ, ಸತ್ಯ ಎಲ್ಲ ಎತ್ತಿ ಕುಟ್ಟೋಯ್ತು ಇವನ ಬಾಯಲ್ಲಿ. ಪಾಪ, ಆ ಕೆಂಪು ಮುಖದೋನು ನೋಟ್ಸ್ ಬರ್‍ಕೋತ ಇದ್ದ ಸೀರಿಯಸ್ಸಾಗಿ, ಇಂಥದ್ದೆಲ್ಲಾ ಒಂದು ಬುಕ್ ಬರೆದು ಎಲ್ಲಿ ಪಬ್ಲಿಷ್ ಮಾಡ್ತಾನೋ!' ಎಂದು ಕೊರಗಿದ. 'ಹೋಗ್ಲಿ ಬಿಡಿ, ನಾವಂತೂ ಆ ಬೆಲೆಯ ಬುಕ್ಸ್ ಓದೋದೂ ಇಲ್ವಲ್ಲ ಎಂದು ಸಮಾಧಾನ ಪಟ್ಕೊಂಡ.

ಈ ಮಧ್ಯೆ ಒಬ್ಬಿಬ್ಬರು ಪುಡಿಗೈಡುಗಳು ಶಿವಾಜಿ, ಶೇಖರ ಇವರುಗಳನ್ನು ಗುರುತಿಸಿಯೇ ಬಿಟ್ಟರು. 'ಅಣ್ಣಾ, ನೀವು 'ಜೀವದ ಬೊಂಬೆ, ರಣಪಿಶಾಚಿ' ಫಿಲಂನಲ್ಲಿ ಮಾಡಿರ್‍ಲಿಲ್ವಾ?' ಎಂದು ವಿಚಾರಿಸಿಕೊಂಡರು - ಕೇಬಲ್ ಭಕ್ತನೊಬ್ಬ 'ಔದಣ್ಣಾ, 'ತಿರುಕ - ತಿರುಕ' ಸೀರಲ್ನಾಗೂ ಪಾಲ್ಟು ಆಕಿದ್ರಿ ಅಲ್ವಾ?' ಎಂದು ಆತ್ಮೀಯತೆ ತೋರಿದ.

'ಅಲ್ನೋಡೋ, ಜೂನಿಯರ್ ಮಂಜುಳಾನೂ ಬಂದವ್ಳೆ' ಎಂದು ತಮ್ಮ ಮೆಚ್ಚಿನ ಕಿರು ತಾರೆಗಳನ್ನು ಗುರುತಿಸಿ ಹರುಷಿಸಿದರು, ಹೆಮ್ಮೆಪಟ್ಟು ಅವರ ಹಿಂದೂ ಮುಂದೂ ಬಿಡದೆ ಓಡಾಡಿದರು. ಸರಸೂ ಈ ಅಭಿಮಾನಿಗಳನ್ನು ಆದರದಿಂದ ಮಾತಾಡಿಸಿಕೊಂಡಳು. 'ಮುಂದೊಮ್ಮೆ... ತನ್ನನ್ನೂ ಹೀಗೆಯೇ....' ನಾಚಿಕೆ ಮುಂದಿನ ಯೋಚನೆಗೆ ಅಡ್ಡಹಾಕಿತು.

ಇಂತಹ ಸುಸಮಯದಲ್ಲಿ 'ಯಾರ್‍ರೀ ಹಳೇಬೀಡ್... ಡಿಸ್ಕೌಂಟ್ ಚಾರ್ಜು' ಎಂಬ ಕೂಗು ಕೇಳಿಸಿತು. ಟೀಮಿನವರು ಒಬ್ಬರ ಮುಖ ಒಬ್ಬರು ನೋಡಿಕೋತ, 'ವೈ ನಾಟ್' ಎಂದು ತೀರ್ಮಾನಿಸಿ, ಬಸ್ಸೋ ವ್ಯಾನೋ ತಿಳಿಯದ ಒಂದು ಪ್ರೈವೇಟ್ ಗಾಡಿಯೊಳಗೆ ತೂರಿಕೊಂಡರು. ಗುಂಡೇಶನ ಲಕ್ಸುರಿ ಏರಿದ

ಮೇಲೆ ರಂಗಣ್ಣ - ಸರಸೂ ಗುಂಡಿಗೆಗಳು ಪ್ರಪಂಚದ ಯಾವ ಮೂಲೆಯ 'ಜೀಪ್ನಿ' ಯನ್ನೂ ಏರಲು ಹಿಂಜರಿಯದಾಗಿದ್ದುವು.

ಹಳೇಬೀಡಲ್ಲಿ ಇಳಿದ ಕೂಡಲೇ ಚುರುಗುಟ್ಟುತ್ತಿದ್ದ ಹೊಟ್ಟೆಗಳನ್ನು ಮರದಡಿ ಕೂತು ತುಂಬಿಸಿಕೊಂಡರು, ರುಸಿಂಗನನ್ನು ಮನಸಾರೆ ಆಶೀರ್ವದಿಸಿದರು. ಅಲ್ಲಿನ 'ನಿರ್ದೇವಾಲಯ'ವನ್ನು ಪರಿಶೀಲಿಸಿ ಬಂದನಂತರ ಶೇಖರ ಒಪಿನಿಯನ್ ನೀಡಿದ: 'ಎಂಥಾ ಆರ್ಕಿಟೆಕ್ಟು ಸಾರ್,... ಎಷ್ಟು ಕರಾರುವಾಕ್ಕಾಗಿ, ಅಂದಗೆಡದಂತೆ ಕಟ್ಟಿದಾನೆ! ಆದರೆ ಮುಗಿಯೋ ಹಂತದಲ್ಲಿ ಯಾಕೋ ಬಿಡಿಎ ಸೈಟಲ್ಲಿ unauthorised ಆಗಿ ಕಟ್ಟಿ ಕೋರ್ಟಿನ ಸ್ಟೇ ಆರ್ಡರು, ಟಾಸ್ಕ್‌ಫೋರ್ಸಿನ ದಾಂಧಲೆಗೆ ಒಳಗಾದ ಮಲ್ಟಿನ್ಯಾಷನಲ್ ಕಂಪನಿಯ ಹೆಡ್‌ಕ್ವಾರ್ಟರ್ ಥರ ಆಗಿಬಿಟ್ಟಿದೆ' ಎಂದು ಕ್ಷಣಕಾಲ ಬೆಂಗಳೂರ ತಾಪತ್ರಯಗಳನ್ನು ನೆನಪಿಸಿದ. ಅವನ್ನು ಮರೆಯಲು ಪಕ್ಕದ ಉಡಿಪಿ ಹೋಟೆಲ ಕಾಫಿ ಸೇವಿಸಿ, ಎಕ್ಸ್‌ಪೋರ್ಟ್ ಮಾಡೆಲ್ ಎಳೇ ಸೌತೇಕಾಯಿ ಕಚ್ಚಿಕೊಂಡು ಎಲ್ಲರೂ ಹಾಸನದ ಬಸ್ಸಿಗೇರಿದರು; ರಜಾ ತಂದ ಮಜಾದ... ಮೆಲುಕು ಹಾಕುತ್ತಾ ಟೀಮು ಮೆಂಬರುಗಳು ಪಯಣಿಸಿದರು, ಮರಳಿ ಹಾಸನಕೇರಿಗೆ.

ಶಾಕ್

ಈಗಿನ ಬೆಲೆಗಳನ್ನು ಕೇಳಿದರೆ
ಶಾಕ್ ಆಗುವುದಲ್ಲಾ!
ಅಲ್ವೇ ಮತ್ತೇ
'ಕರೆಂಟ್' ಪ್ರೈಸಸ್ ತಾನೇ,
'ಶಾಕ್' ಆಗಲೇ ಬೇಕಲ್ಲಾ

– ನಾಗರಾಜ್

ಪ್ರಮುಖರ ಮಾತುಕತೆ

- ಕುಮುದಾ ಪುರುಷೋತ್ತಮ್

ಈಚೆಗೆ ಕಟ್ಮಂಡೂವಿನಲ್ಲಿ ಸಾರ್ಕ್ ಸಮಾವೇಶ ನಡೆದಾಗ ಒಂದು ಸ್ವಾರಸ್ಯ ಸಮಾಲೋಚನೆ ನಡೆದುದನ್ನು ಪತ್ರಿಕೆಗಳು ವರದಿ ಮಾಡಿದ್ದುವು. ಬಾಂಗ್ಲಾದೇಶದ ಬೇಗಂ ಖಾಲಿದಾ ತಮ್ಮ ಮಂಡಿನೋವಿನ ಪರಿಹಾರಾರ್ಥಕ್ಕಾಗಿ ನಮ್ಮ ಅಟಲ್‌ಜೀಯವರ ಬಳಿ ಸಲಹೆ ಕೇಳಿದರಂತೆ! ಸಾರ್ಕ್‌ನಂತಹ ಗಂಭೀರ ಸಂದರ್ಭಗಳಲ್ಲೂ ರಾಷ್ಟ್ರ ನಾಯಕರು ವೈಯಕ್ತಿಕವಾಗಿ ಮಾತನಾಡಿದಾಗ ಅವರ ಮಾತುಕತೆಗಳ ಸ್ವಾರಸ್ಯವೆಂತಹುದು? ಅವರನ್ನು ಸುತ್ತುವರೆದ ರಕ್ಷಣಾ ಕೋಟೆ ಭೇದಿಸಿ ಯಾರಾದರೂ ಆ ಮಾತುಗಳನ್ನು ಹೋಗಿ ಕೇಳಲುಂಟೇ? ನಾನು ಹೇಳಿ ಕೇಳಿ ಲೇಖನಿ ಹಿಡಿದವಳು. ಗನ್ನಿಗಿಂತ ಪೆನ್ನು ಬಲಿಷ್ಠವಾದದ್ದು ಗೊತ್ತಲ್ಲಾ. ಲೇಖನಿ ಹಿಡಿದು ಹಲವು ನಾಯಕ ಮಣಿಗಳಲ್ಲಿ ಪರಕಾಯ ಪ್ರವೇಶ ಮಾಡಿ ಬಂದ ವರದಿ ಇದು. ನಂಬಿದರೆ ನಂಬಿ ಬಿಟ್ಟರೆ ಬಿಡಿ.

ಸಾರ್ಕ್ ಸಭೆಯ ಸಮಯದಲ್ಲಿ ಬೇಗಂ ಖಾಲಿದಾ ತಲೆಯ ಮೇಲಿನ ಹಕ್ಕಿಗೂಡಿನ ಶೃಂಗಾರವನ್ನು ಹೊರಲಾರದೆ ಹೊತ್ತು ಮಂಡಿಯ ಮೇಲೆ ಕೈಯಿಟ್ಟುಕೊಂಡು ವೇದಿಕೆಯನ್ನು ಹತ್ತಲಾರದೆ ಹತ್ತುತ್ತಾರೆ. ಪಕ್ಕದಲ್ಲಿ ಅಟಲ್‌ಜೀ ಸಹಾನುಭೂತಿಯುತರಾಗಿ ನೋಡುತ್ತಾರೆ.

ಅಟಲ್‌ಜೀ: ಸಲಾಂ ಅಲೇಕುಂ ಬೇಗಂ ಸಾಹಿಬಾ. ಮಂಡಿ ನೋವು ಜಾಸ್ತಿಯಾಗಿರುವಂತಿದೆ?

ಬೇಗಂ: ಏನಂದ್ರಿ? ಮಂಡಿನೋವೇ? ನಿಮಗೆ ಹೇಗೆ ತಿಳೀತು? ನಾನು ಯಾರ ಬಳಿಯೂ ಬಾಯ್ಬಿಟ್ಟಿಲ್ಲವಲ್ಲಾ!

ಅಟಲ್‌ಜೀ: ನಾನೊಬ್ಬ ಅನುಭವಿ ರೋಗಿ. ಎಷ್ಟು ಅನುಭವ ಅಂದ್ರೆ ಮುಖನೋಡಿ ಯಾರ್‍ಯಾರಿಗೆ ಮಂಡಿನೋವಿದೆ ಅಂತ ಹೇಳಿಬಿಡಬಲ್ಲೆ. ಅಷ್ಟು ಕಷ್ಟಪಟ್ಟು ವೇದಿಕೆ ಹತ್ತೋಬದಲು ಅಂಗರಕ್ಷಕರ ಸಹಾಯ ತೊಗೊಂಡು ಹತ್ತಬೇಕಾಗಿತ್ತು.

ಬೇಗಂ: ನಾನು ಹಾಗೇನಾರಾ ಮಾಡಿದ್ರೆ ಪ್ರಧಾನಿಗೆ ವಾಸಿಯಾಗದ ಖಾಯಿಲೆ, ಸಾವಿನಂಚಿನಲ್ಲಿದ್ದು ಇಲ್ಲಿಗೂ ಅಲ್ಲಿಗೂ ತೂಗಾಡುತ್ತಿದ್ದಾರೆ ಎಂದೆಲ್ಲಾ ನಮ್ಮ ಮಾಧ್ಯಮಗಳು ಸಾರಿ ನಾನು ನನ್ನ ನಾಡಿಗೆ ಹಿಂದಿರುಗುವಲ್ಲಿ ನನ್ನ ರಾಜಕೀಯ ವಿರೋಧಿಗಳು ಬೇರೊಬ್ಬ ಉತ್ತರಾಧಿಕಾರಿಯನ್ನು ಕುರ್ಚಿಮೇಲೆ

ಕೂರಿಸಿಬಿಟ್ಟಿರುತ್ತಾರೆ. ನಮ್ಮಂತಹವರು ಪ್ರಾಣಸಂಕಟವಾಗುತ್ತಿದ್ದರೂ ಮುಗುಳ್ನಗುತ್ತಾ 'ಐ ಆ್ಯಮ್ ಫೈನ್' ಎಂತಲೇ ಹೇಳುತ್ತಿರಬೇಕು. ನಿಮಗೆ ಎರಡೂ ಮಂಡಿಗಳ ನೋವಿತ್ತು ಎಂದು ಕೇಳಿದ್ದೆ. ಈಗ ಹೇಗಿದ್ದೀರಿ?

ಅಟಲ್‌ಜೀ: 'ಛೂ ಮಂತ್ರಗಾಳಿ' ಎನ್ನುವಂತೆ ಮಾಯವಾಗಿಬಿಡ್ತು. ಆ ಮಾಂತ್ರಿಕನ ಹೆಸ್ರು ಡಾ॥ ರಾವತ್ ಅಂತ. ನಮ್ಮೋನೇ. ಆದ್ರೆ ಅಮೇರಿಕದಲ್ಲಿ ಉದ್ಯೋಗ ಮಾಡುವ ವೈದ್ಯ. ನನಗಾಗಿ ಮುಂಬೈಗೆ ಬಂದು ಆಪರೇಷನ್ ಮಾಡಿ ಮೂಳೆ ರಿಪೇರಿ ಮಾಡಿಬಿಟ್ಟ.

ಬೇಗಂ: ನೀವೇ ಅಮೇರಿಕಕ್ಕೆ ಹೋಗಿ ಮಾಡಿಸಿಕೊಂಡಿದ್ದರೆ ಸಿಂಪಲ್ ಆಗಿರ್ತಿತ್ತು ಅಲ್ವೇ?

ಅಟಲ್‌ಜೀ: ಒಂದೊಂದು ಮಂಡಿಗೂ ಸರಾಸರಿ ಆರುವಾರ ವಿಶ್ರಾಂತಿ ಬೇಕಾಯ್ತು. ಹನ್ನೆರಡು ವಾರಗಳು ದೇಶದಿಂದ ಹೊರಗಿರೋಕ್ಕೆ, ಯಾವ ಪ್ರಧಾನಿಗೆ ಅಷ್ಟೊಂದು ರಜ ಸಿಗುತ್ತೆ ಹೇಳಿ. ಆಸ್ಪತ್ರೆಯಲ್ಲೇ ನನ್ನ ಆಫೀಸು ಕೆಲ್ಸ ಮಾಡ್ತಿದ್ದೆ. ಅಮೇರಿಕಕ್ಕೆ ಹೋಗಿದ್ದಿದ್ರೆ ಸುಮ್ನೆ ವಿದೇಶಕ್ಕೆ ಹೋಗ್ತಾನೆ ಅಂತ ವಿರೋಧ ಪಕ್ಷದವರು ಹುರಿದು ಮುಕ್ಕಿಬಿಡ್ತಿದ್ರು.

ಬೇಗಂ: ಅವ್ರಿರೋದೆ ಅದಕ್ಕಲ್ವೇ? ಯುವರ್ ಎಕ್ಸಲೆನ್ಸಿ. ನಿಮ್ಮ ಡಾಕ್ಟರರ ವಿಳಾಸ, ಫೋನ್ ನಂ. ಸ್ವಲ್ಪ ಕೊಡಿ. ನನಗೂ ರಿಪೇರಿಯಾಗುತ್ತಾ ನೋಡ್ತೀನಿ.

ಅಟಲ್‌ಜೀ: ಅಗತ್ಯವಾಗಿ ಆಗ್ಲಿ ಬೇಗಂ ಸಾಹಿಬಾ. ನನ್ನ ಕ್ಯಾಬಿನೆಟ್ ಸೆಕ್ರೆಟರಿಗೆ ಕೊಡಲು ಹೇಳ್ತೀನಿ.

ಮರುದಿನದ ಪತ್ರಿಕೆಗಳಲ್ಲಿ ಭಾರತ ಹಾಗೂ ಬಾಂಗ್ಲಾದೇಶದ ಪ್ರಧಾನಿಯವರು ತಮ್ಮ ದೇಶದ ನಡುವಿನ ವಿವಾದ ಕುರಿತು ಗಂಭೀರ ಮಾತುಕಥೆ ನಡೆಸಿದರು ಎಂದಿತ್ತು!

★★★

ವಿರೋಧ ಪಕ್ಷ ಇರುವುದೇ ಸರ್ಕಾರ ಯಾವ ನಿರ್ಣಯ ತೆಗೆದುಕೊಂಡರೂ ಅದನ್ನು ವಿರೋಧಿಸಲು, ಮಾತೆತ್ತಿದ್ದರೆ ಮುನಿಸಿಕೊಂಡು ಕೂಡಲು, ಪ್ರತಿಭಟಿಸಿ ಪಾರ್ಲಿಮೆಂಟಿನ ಕಾರ್ಯ ಸ್ಥಗಿತ ಮಾಡಲು ತಾನೇ? ಈಚೆಗೆ ರಾಷ್ಟ್ರದ ಭದ್ರತೆಯ ವಿಷಯದಲ್ಲಿ ತಮ್ಮನ್ನು ಅಲಕ್ಷ ಮಾಡಿದರು ಎಂದು ವಿರೋಧ ಪಕ್ಷ ಮುನಿಸಿಕೊಂಡಾಗ ಪ್ರಧಾನಿಯವರು ಅದರ ನಾಯಕಿಯನ್ನು ತಮ್ಮ ನಿವಾಸಕ್ಕೆ ಆಹ್ವಾನಿಸಿ ಮಾತುಕಥೆ ನಡೆಸಿದರಂತಲ್ಲ ಅದರ ವರದಿ ಹೀಗಿದೆ.

ಪ್ರಧಾನಿ: ಬನ್ನಿ ಬನ್ನಿ ದೇವೀಜಿ. ರಾಜಕಾರ್ಯ ಬಾಹುಳ್ಯದಿಂದಾಗಿ ತಮ್ಮನ್ನು ಕಂಡು ಸಮಾಲೋಚನೆ ನಡೆಸಲಾಗಲಿಲ್ಲ. ಏನು ತರಿಸಲಿ ಚಾಯ್, ಕಾಫಿ, ಸಮೋಸಾ?

ನಾಯಕಿ: ಏನೂ ಬೇಡ ಅಟಲ್‌ಜೀ. ಮೈ ತೂಕ ಕಾಯ್ದುಕೊಳ್ಳಬೇಕಲ್ಲಾ. ಹಾಗಾಗಿ ಆಗಾಗ ಬಾಯಾಡಿಸುವುದು ಬಿಟ್ಟಿದ್ದೇನೆ.

ಪ್ರಧಾನಿ: ಮೈ ತೂಕ! ಹ್ಹ...ಹ್ಹ.... ನನ್ನನ್ನು ನೋಡಿ ಹೇಳುತ್ತಿಲ್ಲವಷ್ಟೆ? ಸಮೋಸ ನೋಡುತ್ತಲೇ ನನ್ನ ನಿರ್ಧಾರವೆಲ್ಲಾ ಕರಗಿ ಹೋಗುತ್ತದೆ. ಈ ಮೈ ತೂಕ ಒಂದು ಇಷ್ಟಿಲ್ಲದಿದ್ದರೆ ಮಂಡಿನೋವು ಬರುತ್ತಲೇ ಇರಲಿಲ್ಲ ಎಂದು ಡಾಕ್ಟರೂ ಹೇಳುತ್ತಾರೆ. ನಾನೇನ್ಮಾಡ್ಲಿ ಹೇಳಿ. ಐ ಆ್ಯಮ್ ಹೆಲ್ಪ್‌ಲೆಸ್. ನನ್ನ ವಿಷಯ ಬಿಡಿ. ನಿಮ್ಮ ಮೊಮ್ಮಗು ಹೇಗಿದೆ?

ನಾಯಕಿ: ಚನ್ನಾಗಿ ಬೆಳೀತಾ ಇದೆ. ಆದರೆ ಬಲು ತುಂಟ ಮಗು. ನಾನೆಲ್ಲಿ ಹೊರಟರೂ ತಾನೂ ಬರ್ತೀನಿ ಅಂತ ರಚ್ಚೆ ಹಿಡಿಯುತ್ತೆ. ಪಾರ್ಲಿಮೆಂಟಿಗೆ ಹೊರಟರೆ ಅಲ್ಲಿಗೆ, ಪ್ರಧಾನಿ ನಿವಾಸಕ್ಕೆ ಅಂದ್ರೆ ಅಲ್ಲಿಗೆ ಹೀಗೆ ಎಲ್ಲಾ ಜಾಗಕ್ಕೂ ಬರ್ತೀನಿ ಅಂತ ಹಟ ಮಾಡತ್ತೆ. ಏನೋ ಒಂದು ಸಬೂಬು ಹೇಳಿ ಬಂದೆ.

ಪ್ರಧಾನಿ: ಏನು ಸಬೂಬು ಹೇಳಿದ್ರಿ? ಬಹಳ ಕುತೂಹಲ ನನಗೆ. ಲಹರಿ ಬಂದರೆ ಅದರ ಮೇಲೇ ಕವಿತೆ ಬರ್‍ಯೋಣಾಂತ ಅಷ್ಟೆ.

ನಾಯಕಿ: ಪ್ರಧಾನೀನ ಏನು ನೋಡೋದು. ಮುಂದೊಂದು ದಿನ ನೀನೇ ಪ್ರಧಾನಿ ಆಗುವಂತೆ ಅಂದೆ. ಮಗು ಸುಮ್ಮನಾಯ್ತು.

ಪ್ರಧಾನಿ: ನನಗೊಂದು ಸಂದೇಹ. ಮಗುವಿನ ಜೊತೆ ಯಾವ ಭಾಷೇಲಿ ಮಾತನಾಡ್ತೀರ? ಇಟಾಲಿಯನ್, ಇಂಗ್ಲೀಷ್ ಅಥವಾ ಹಿಂದಿ?

ನಾಯಕಿ: ನಾನೊಬ್ಬೇ ಮಗು ಜೊತೆ ಇದ್ದಾಗ ಇಟಾಲಿಯನ್ ಸ್ವಾಭಾವಿಕವಾಗಿ ಬಂದ್ಬಿಡತ್ತೆ. ನನ್ನಳಿಯ ಎದುರಿಗಿದ್ರೆ ಇಂಗ್ಲೀಷಿನಲ್ಲಿ ಮಾತಾಗುತ್ತೆ.

ಪ್ರಧಾನಿ: ಹಾಗಾದ್ರೆ ಮನೇಲಿ ಹಿಂದೀಲಿ ಮಾತನಾಡೋದೇ ಇಲ್ವೇ?

ನಾಯಕಿ: ಆಡ್ಬಾರ್ದು ಅಂತೇನಿಲ್ಲ. ಆದ್ರೆ ಅದನ್ನ್ಯಾರಾದ್ರೂ ಬರಕೊಡ್ಬೇಕಲ್ಲಾ.

★★★

ನಮ್ಮ ಗೃಹ ಸಚಿವ ಅಡ್ವಾನಿಯವರು ಭಯೋತ್ಪಾದನೆಯ ವಿರುದ್ಧ ಅಮೇರಿಕದ ಬೆಂಬಲ ಗಳಿಸಲು ವಾಷಿಂಗ್‌ಟನ್ ಡಿ.ಸಿ.ಗೆ ಹೋಗಿದ್ದರಲ್ಲ, ಆಗ ಸೆಕ್ರೆಟರಿ ಆಫ್ ಸ್ಟೇಟ್ ಕೋಲಿನ್ ಪೊಪೆಲ್ ಬಳಿ ಮಾತನಾಡುತ್ತಿದ್ದಾಗ ಅನಿರೀಕ್ಷಿತವಾಗಿ ಅಧ್ಯಕ್ಷ ಬುಷ್‌ರ ಆಗಮನವಾಯಿತಂತೆ. ಮುಂದೆ ಓದಿ.

ಬುಷ್: ವೆಲ್ ಕಂ ಟು ಅವರ್ ಕಂಟ್ರಿ ಎಂಡ್ ಗಾಡ್ ಬ್ಲೆಸ್ ಅಮೇರಿಕ. ಮಿ. ಗಡ್ವಾನಿ. ಕಾಶ್ಮೀರ ಸಮಸ್ಯೆಯಿಂದಾಗಿ ಯಾವುದೇ ಕ್ಷಣ ಯುದ್ಧ ಆರಂಭವಾಗಬಹುದು. ನಿಮ್ಮೊಂದಿಗೆ ಅರ್ಜೆಂಟಾಗಿ ಮಾತನಾಡಲು ನಿಮಗಿಂತ ಮುಂಚೆ ನಾನೇ ಬಂದೆ.

ಅಡ್ವಾನಿ: ಧನ್ಯವಾದಗಳು ಯುವರ್ ಎಕ್ಸಲೆನ್ಸಿ. ಆದರೆ ನಾನು... ನಾನು.

ಪೊವೆಲ್: ಮಿ. ಪ್ರೆಸಿಡೆಂಟ್ ಇವರು ಮಿ. ಅಡ್ವಾಣಿ, ಗಡ್ವಾನಿ ಅಲ್ಲ.

ಬುಷ್: ಸಾರಿ... ಐ. ಬೆಗ್ ಯುವರ್ ಪಾರ್ಡನ್. ನಾನು ನೇರ ವಿಷಯಕ್ಕೆ ಬರುತ್ತೇನೆ. ನೀವು ಭಯೋತ್ಪಾದನೆಗೆ ನೀಡುತ್ತಿರುವ ಬೆಂಬಲ ಈ ಕೂಡಲೇ ನಿಲ್ಲಿಸಬೇಕು. ನೀವು ಹುಟ್ಟುಹಾಕಿದ ಉಗ್ರಗಾಮಿಗಳು ಎಲ್ಲೆಲ್ಲೂ ವಿಧ್ವಂಸ ಕೃತ್ಯ ಮಾಡುತ್ತಿದ್ದಾರೆ. ಮೊದಲು ಟಾಲಿಬಾನ್‌ಗೆ ಕುಮ್ಮಕ್ ಕೊಟ್ರಿ, ಒಸಾಮಾಗೆ ಮಣೆ ಹಾಕಿದ್ರಿ. ಆತ ನೋಡಿದ್ರೆ ನಮ್ಗೇ ಚಳ್ಳೇ ಹಣ್ಣು ತಿನ್ನಿಸ್ದ. ನೀವು ಇದೆ ಧಾಟೀಲಿ ಮುಂದುವರದ್ರೆ ಇನ್ನೊಂದು ಯುದ್ಧಕ್ಕೆ ಆಮಂತ್ರಣ ಕೊಟ್ಟಂತೆಯೇ.

ಅಡ್ವಾಣಿ: ಯುವರ್ ಎಕ್ಸಲೆನ್ಸಿ. ನೀವು ತಪ್ಪು ತಿಳಿದಿದ್ದೀರಿ. ನಮ್ಮಲ್ಲಿ ಭಯೋತ್ಪಾದಕರು, ಉಗ್ರಗಾಮಿಗಳಿಗೆ ಬೆಂಬಲ ಇಲ್ಲ. ಇಷ್ಟಕ್ಕೂ ಕಾಶ್ಮೀರ ನಮ್ಮ ಕೈನಲ್ಲಿದೆ. ನಾವ್ಯಾತಕ್ಕೆ ಅವ್ರನ್ನ ಅಲ್ಲಿ ಕಳ್ಸೋಣ? ಅಂಥಾವ್ರು ಇದ್ರೆ ಮೊದಲು ಹಿಡಿದು ಬಲಿ ಹಾಕ್ತೀವಿ.

ಪೊವೆಲ್: ಮಿ. ಪ್ರೆಸಿಡೆಂಟ್. ನನ್ಮಾತು ಕೇಳಿ. ದೇರ್ ಈಸೆ ಮಿಸ್ಟೇಕ್.

ಬುಷ್: (ರೇಗುತ್ತಾ) ಪೊವೆಲ್. ನನಗೆ ಮಾತಾಡೋಕ್ಕೆ ಅವಕಾಶ ಕೊಡಿ. ನೀವು ಪ್ರಧಾನ ಕಾರ್ಯದರ್ಶಿ ಇರ್ಬಹುದು. ಆದ್ರೆ ನಿಮ್ಗೆ ನಾನು ಬಾಸ್. ಮಿ. ದಿವಾನ್‌ಜಿ. ಇಂಡಿಯಾದ ನೇತಾಗ್ಳು ನಮ್ಮ ಹತ್ರ ತುಂಬಾ ತಕರಾರ್ ಎತ್ತಿದ್ದಾರೆ. ನಿಮ್ಮಲ್ಲಿಯ ಉಗ್ರಗಾಮಿಗ್ಳನ್ನು ನಿಯಂತ್ರಿಸಲೇಬೇಕು ಇಲ್ದಿದ್ರೆ ವಿಶ್ವದ ಶಾಂತಿಗೇ ಸಂಚಕಾರ ಅನ್ನುತ್ತಿದ್ದಾರೆ. ಬಿ. ರೀಸನೇಬಲ್ ಮ್ಯಾನ್.

ಅಡ್ವಾಣಿ: ಅಧ್ಯಕ್ಷ ಮಹಾಶಯ. ನಾನು ಭಾರತದ ಗೃಹ ಸಚಿವ. ನೀವು ಅಂದುಕೊಂಡಿರುವಂತೆ ಪಾಕಿಸ್ತಾನದ ಅಧ್ಯಕ್ಷ ಅಲ್ಲ. ನಿಮ್ಮ ಹತ್ರ ಫಿರ್ಯಾದಿ ತಂದ್ರೆ ನನ್ನನ್ನೇ ಅಪರಾಧಿ ಮಾಡ್ತಿರಲ್ಲ. ಇದು ನ್ಯಾಯಾನಾ? ಅಲ್ದೆ ನನ್ನ ಹೆಸರು ಅಡ್ವಾನಿ ADVANI ಅಂತ.

ಬುಷ್: ಮಿ. ಅಡ್ವಾಣಿ. ಏನೂ ತಿಳ್ಕೋಬೇಡಿ. ಈ ಏಷ್ಯನ್ ಹೆಸರುಗಳು ನನಗೆ ತುಂಬಾ ಗೊಂದಲಮಯ. ನೀವು ಪಾಕಿಸ್ತಾನದವ್ರಲ್ವೇ... ಓ.... ಓ... ಐ ಆ್ಯಮ್ ಕನ್‌ಫ್ಯೂಸ್ಡ್. ಮಿ. ಪೊವೆಲ್. ನೀವೇ ಮಾತು ಮುಂದುವರ್ಸಿ. ನಾನು ಬರ್ತೀನಿ.

★★★

ಪಾಠ

ಮೂವರು ಸತಿಯರ
ಪಡೆದ ದಶರಥ -
ನ ಹಿಂಸೆ ನೋಡಿ ರಾಮ
ಆದ ಏಕಪತ್ನಿವ್ರತಸ್ಥ

ರಾಮದಾಸ ಹನುಮಂತ
ಭಾರೀ ಬುದ್ಧಿವಂತ
ನೋಡಿಯೇ ಕಲಿತ
ಪಾಲಿಸಿದ ಬ್ರಹ್ಮಚರ್ಯದ ವ್ರತ!

– ಬಾಲು

ಈಗ ಸಿದ್ಧವಾಗಿವೆ

ಹಿಂದಿನ ಹಾಸ್ಯೋತ್ಸವಗಳಿಂದ ಆಯ್ದ ರಸ ನಿಮಿಷಗಳ ವಿಸಿಡಿ

ರಾಶಿ - ರತ್ನ ಸಂಸ್ಮರಣೆ - 72 ನಿಮಿಷಗಳು ರೂ. 200/-

ಬೀಚಿ ಸಂಸ್ಮರಣೆ - 72 ನಿಮಿಷಗಳು ರೂ. 200/-

ಕೊರಿಯರ್ ಚಾರ್ಜ್ ಪ್ರತ್ಯೇಕ:

ಬೆಂಗಳೂರಿನಲ್ಲಿ - ರೂ. 20/-

ಇತರ ಪ್ರದೇಶಗಳಿಗೆ - ರೂ. 40/-

ತಮ್ಮ ಚೆಕ್‌ಗಳನ್ನು
''ಕೊರವಂಜಿ - ಅಪರಂಜಿ ಟ್ರಸ್ಟ್'' ಹೆಸರಿಗೆ ನಮೂದಿಸಿ,
ನಮ್ಮ ವಿಳಾಸಕ್ಕೆ ಕಳಿಸಿ ಒಂದು ವಾರದಲ್ಲಿ
ವಿಸಿಡಿ ನಿಮಗೆ ತಲುಪಿಸುತ್ತೇವೆ.

ನಮ್ಮ ವಿಳಾಸ
ಕೊರವಂಜಿ ಅಪರಂಜಿ ಟ್ರಸ್ಟ್
ನಂ. 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ
ಬೆಂಗಳೂರು - 560 003
ದೂರವಾಣಿ: 3345259

ಓದುಗರ ಪ್ರತಿಕ್ರಿಯೆ

300 ವರ್ಷ old ಆದ್ರೂ, up to date in information ಆಗಿರೋ ಅಜ್ಜಿಯ ತರ್ಕ ಚೆನ್ನಾಗಿದೆ. ಕಮಲಾ ರಾಮಸ್ವಾಮಿಯವರ ಬಾಚಣಿಗೆ ಪ್ರಕರಣ ನನ್ನ ಹಾಗೂ ನಮ್ಮವರ ಮಧ್ಯೆ frequently occuring argumentsನ್ನೇ ಹೋಲುತ್ತದೆ! It was good for him to read it. ನಿಮ್ಮ "... ಧರ್ಮಯುದ್ಧ" ದಲ್ಲಿ heaven can do well to copy us, ಆಗಾಗಲಾದರೂ ಅನ್ನೋದೂ; ಹಾಗೂ ಮದುಮಗನಿಗೆ ಭಗವದ್ಗೀತೆಯ ಉಡುಗೊರೆ ಈ ಕಾಲದಲ್ಲಿ ಕೊಟ್ಟು ಅವನ futureಗೆ ತಂಪೆರೆಯಬಹುದು ಅನ್ನೋ idea ಬಂದು ಸಖತ್ತಾಗಿ ನಕ್ಕೆವು ನಾವೆಲ್ಲಾ. ವೈದ್ಯರ ಗಂಡಭೇರುಂಡ ಲಾ ಜವಾಬ್! ನಕ್ಕೂ ನಕ್ಕೂ ಹೊಟ್ಟೆ ಹುಣ್ಣಾಯ್ತು. Cartoons are really fine. On the whole, you have been providing us very good humour. Thanks.

ಶ್ಯಾಮಲಾ ರವಿಶಂಕರ್

ಗಳಿಗೆಯ ಕೆಳಗೆ ಅಪರಂಜಿಯಲ್ಲಿ 'ಗಂಡಭೇರುಂಡ' ಓದಿದಾಗಿಂದಲೂ ನನ್ನ ರುಂಡಕ್ಕೆ ಕೆಲಸ ಹತ್ತಿದೆ. ಬಾಗಿಲಾಚೆಗೆ ಹೊರಳಿ ನೋಡುತ್ತ ನನ್ನ ಜೋಡುಗಳೆಲ್ಲ ಸಮ್ಮುಖವಾಗಿದೆಯೋ ಇಲ್ಲವೋ ಎಂದು ಖಾತ್ರಿ ಪಡಿಸಿಕೊಳ್ಳಲು.

ಇರುತ್ತ, ಇಂಥ ಮಸ್ತ್ ಬರಹ ಓದಿ ನಕ್ಕು, ನಕ್ಕು ಖುಷಿಪಟ್ಟು ಬಹಳ ಕಾಲ ಸಂದಿತ್ತಲ್ಲ ಅಂಬುದು ನನ್ನ ಮುಂಡದಲ್ಲಿ ಮೂಡಿದ್ದರಿಂದ ನಿಮಗೆ 'ಭಪ್ಪರೆ, ಭಳಿರೇ' ತಿಳಿಸಬೇಕೆಂದು ಮೂಡು ಒಡಮೂಡಿತು.

ಇರಲಿ ರಂಗ್ನಾಮಿ, ರಂಗಪ್ವಾವಾಸ ಕಾಲದಲ್ಲಿ (ವನವಾಸ, ಅಜ್ಞಾತವಾಸಗಳ ಕ್ಷಮೆ ಇರಲಿ) ಕಟಕ್ ರೊಟ್ಟಿ ತಿಂದು ತಿಂದು ಹಲ್ಲು ಸವೆಸಿಕೊಂಡವ. ಮತ್ತೊಮ್ಮೆ ರಂಗ್ನಾಮಿವಾಸದ ನಂತರ ಪಾಪ, ಸುಚ್ಚಿನುಂಡೆ ಹ್ಯಾಗೆ ಹ್ಯಾಂಡಲ್ ಮಾಡಿದನೋ! ಬಲಿತ ಬೆಂಡೇಕಾಯಿ ಸಾರು ರುಚಿಕಟ್ಟೆನಿಸಿತೋ, ರುಚಿ cut ಆಯಿತೋ!! ತುಂಬಾ ಮಸ್ತ್ ಆಗೇದ್ರೀ.

– ಅನಂತ ಕಲ್ಲೋಳ


ನಿಮ್ಮ 'ಗಂಡಭೇರುಂಡ' ಕಥೆಯನ್ನೋದಿ ಅಭಿನಂದಿಸಲು ಬರೆಯುತ್ತಿದ್ದೇನೆ.... ಒಂದು ಕಲ್ಪಿತ ಲಘು ಘಟನೆಯನ್ನು ಕಥೆಯಾಗಿ ಸೃಜಿಸಿರುವಲ್ಲಿ, ಇವತ್ತಿನ ದಿನದಲ್ಲಿ ಅತ್ಯಂತ ವಾಸ್ತವವೂ ಆರೋಗ್ಯಪೂರ್ಣವೂ ಆಗಬಹುದಾದ ಲೋಕದೃಷ್ಟಿಯೊಂದನ್ನೇ ಸೃಷ್ಟಿಸಿರುವುದು ತುಂಬಾ ಮಹತ್ವದ್ದು. ಕನ್ನಡಕ್ಕೆ - ಜಗತ್ತಿಗೆ - ಪರಂಪರೆಗೆ (ಮಾಸ್ತಿಯೂ ಕೂಡಿ) ಬಲು ಪ್ರೀತಿಯಿಂದ ಮತ್ತು ಅಭಿಮಾನ ಹಾಗೂ ಅನುಮಾನಗಳಿಂದ ಸಂಕೀರ್ಣವಾಗಿ ಪ್ರತಿಸ್ಪಂದಿಸುವ ಈ ಕಿರುಕಥೆ ಅಸಾಧಾರಣವಾದದ್ದೆನಿಸಿತು. ಈ ಕಥನಕ್ಕಿರುವ ಅನೇಕ ಸ್ತರಗಳು ನನ್ನನ್ನು ಆಕರ್ಷಿಸಿದವು. ಈ ಕಥೆ 'ರೈಲಿ'ಗೆ ಹೇಗೆ ಸ್ಪಂದಿಸುತ್ತದೆಯೆಂಬ ಸಣ್ಣ ಅಂಶವೊಂದನ್ನೇ ಬಹು ಹೊತ್ತು ಪರಿಭಾವಿಸುವಂತಾಯಿತು.

– ಕೆ.ವಿ. ಸುಬ್ಬಣ್ಣ

ಹೆಗ್ಗೋಡು



"ಐದ್ನಿಮಿಷ ಮೆಡಿಟೇಟ್ ಮಾಡಿ, ಇಪ್ಪತ್ನಿಮಿಷ FTV ನೋಡ್ಬಿಡು ಬ್ಯಾಲನ್ಸ್ ಆಗತ್ತೆ ಗುರೂ"



AMBUTHIRTHA
POWER PRIVATE LIMITED
2ND FLOOR, 21/19, CRAIG PARK ROAD,
M.G.ROAD CROSS, BANGALORE-560 001,INDIA
TEL:91-80-5597616/5599654/5595315,FZX:91-80-5597617
e-mail: suchind@giasbg01.vsnl.net.in

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR